ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಅಕ್ಟೋಬರ್ 2014 ಮಾಸ ಪತ್ರಿಕೆ

ಸಂಪುಟ : 37
ಸಂಚಿಕೆ : 1
ಪುಟ : 12
ಬೆಲೆ : ₹ 5/-



ಬರಹಗಾರರ ಕಮ್ಮಟ 4

ಮಕ್ಕಳ ದಿನಾಚರಣೆ ಮತ್ತು ನಮ್ಮ ಹೊಣೆ 6

A Journal of Karnataka State Secondary Teachers' Association

# ಸಂಪಾದಕೀಯ

ಭಾರತದ ಮಂಗಳಯಾನ ಅತ್ಯಂತ ಯಶಸ್ವಿಯಾಗಿದ್ದು ವಿಜ್ಞಾನಿಗಳ ಯಶಸ್ಸಿನ ಮಕುಟಕ್ಕೆ ಮತ್ತೊಂದು ಗರಿಯನ್ನು ಏರಿಸಿಕೊಂಡಿದೆ. ನಮ್ಮ ವಿಜ್ಞಾನಿಗಳ ಸಾಧನೆ ಜಗತ್ತನ್ನೇ ನಿಬ್ಬೆರೆಗಾಗಿದೆ. ಅತ್ಯಂತ ಕಡಮೆ ವೆಚ್ಚದಲ್ಲಿ ಮಂಗಳಕ್ಕೆ ಒಔಬ ನೌಕೆಯನ್ನು ಯಶಸ್ವಿಯಾಗಿ ಉಡಾಯಿಸಿದೆ. ಭಾರತೀಯ ವಿಜ್ಞಾನಿಗಳ ಸಾಧನೆ ಎಲ್ಲರೂ ಹೆಮ್ಮೆ ಪಡುವ ಸಂಗತಿಯೇ ಸರಿ. ಮಂಗಳಯಾನದ ಸಾಧನೆಗಾಗಿ ನಮ್ಮ ಎಲ್ಲಾ ವಿಜ್ಞಾನಿಗಳಿಗೆ ಮಾಧ್ಯಮ ಶಿಕ್ಷಕ ಸಂಘದ ಪರವಾಗಿ ಹಾಗೂ ವೈಯುಕ್ತಿಕವಾಗಿ ಮನದಾಳದ ಅಭಿನಂದನೆಗಳು. ಪ್ರಾಚೀನ ಕಾಲದಿಂದಲೂ ಭಾರತೀಯ ವಿಜ್ಞಾನಿಗಳ ಸಾಧನೆಗಳು ಎಲ್ಲರಿಗೂ ದಾರಿದೀಪ ವಾಗಿಯೇ ಇದೆ.


ದೀಪಗಳ ಬೆಳಕಿನ ಹಬ್ಬ ದೀಪಾವಳಿ ಈ ಸಂಚಿಕೆಯ ಜೊತೆಗೇ ಬರುತ್ತಿದೆ. ನರಕ ಚತುರ್ದಶಿ ನರಕಾಸುರನ ಸಂಹಾರದ ದ್ಯೋತಕ. ಸಮಾಜದಲ್ಲಿ ನಮ್ಮ ನಡುವೆ ಇರುವ ನರಕಾಸುರರು, ನಮ್ಮೊಳಗೆ ಇರುವ ನರಕಾಸುರರು ಹೆಜ್ಜೆ ಹೆಜ್ಜೆಗೂ ನಮ್ಮನ್ನು ಕಾಡುತ್ತಿದ್ದಾರಲ್ಲಾ? ಆ ಎಲ್ಲಾ ನರಕಾಸುರರ ಸಂಹಾರ ಆಗುವುದು ಯಾವಾಗ ಎಂಬ ನಿರೀಕ್ಷೆಯಲ್ಲೇ ನಾವು ಜೀವಿಸಬೇಕಾಗಿದೆ. ನರಕಾಸುರರೆಲ್ಲ ಸಂಹಾರವಾಗಿ ಜೀವನದ ದೀಪವು ಬೆಳಗಿ ನೆಮ್ಮದಿಯ ಪ್ರಕಾಶ ಶೀಘ್ರ ಬರುವುದೆಂಬ ಸದಾಶಯದೊಂದಿಗೆ ದೀಪಾವಳಿಯನ್ನು ಆಚರಿಸೋಣ.

ನವೆಂಬರ್ 1 ಕನ್ನಡಿಗರೆಲ್ಲರ ಸಂಭ್ರಮದ ಕನ್ನಡ ರಾಜ್ಯೋತ್ಸವ ದಿನ. ಕರ್ನಾಟಕದ ಏಕೀಕರಣವಾಗಿ, ಕನ್ನಡಿಗರೆಲ್ಲರ ಭಾವನೆ ಒಂದಾಗಿ, ನಾಡು ನುಡಿಗೆ ಶ್ರಮಿಸುವ ಸಂಕಲ್ಪ ಮಾಡಿದ ದಿನ. ಆದರೆ ಈಗ ಏನಾಗುತ್ತಿದೆ? ಕನ್ನಡ ನಾಡು ನುಡಿಯ ಬಗೆಗೆ ಕನ್ನಡಿಗರು ಎಷ್ಟು ಅಭಿಮಾನ ಹೊಂದಿದ್ದೇವೆ? ಮುಂತಾದ ಬಹಳಷ್ಟು ಪ್ರಶ್ನೆಗಳಿಗೆ ಉತ್ತರ ಸಂತೋಷದಾಯಕವಾಗಿರುವುದಿಲ್ಲ. ಆಡಂಬರದ, ಅದ್ದೂರಿಯ ಕಾರ್ಯಕ್ರಮಗಳನ್ನು ಮಾಡುವುದರೊಂದಿಗೇ ಶುದ್ಧವಾದ ಹಾಗೂ ತಪ್ಪಿಲ್ಲದ ಕನ್ನಡವನ್ನು ಮಾತನಾಡಿ, ಓದಿ, ಬರೆಯುವುದಕ್ಕೆ ನಮ್ಮ ವಿದ್ಯಾರ್ಥಿಗಳು, ನೆರೆಹೊರೆಯವರಿಗೆ ಸಹಕರಿಸಬಹುದಲ್ಲವೇ?

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ನವೆಂಬರ್ ತಿಂಗಳಲ್ಲಿ ಮಕ್ಕಳ ದಿನಾಚರಣೆ ಹಾಗೂ ಅಂತರರಾಷ್ಟ್ರೀಯ ಮಕ್ಕಳ ದಿನವನ್ನು ಆಚರಿಸಲಾಗುವುದು. ಮಕ್ಕಳನ್ನು ಸತ್ಪ್ರಜೆಗಳಾಗಿ ರೂಪಿಸುವ ಹೊಣೆ ಶಿಕ್ಷಕರದು. ವಿದ್ಯಾರ್ಥಿಗಳು ಅನುಸರಿಸಬೇಕಾದ ಗುಣ, ನಡವಳಿಕೆಗಳು ಶಿಕ್ಷಕರಲ್ಲಿ ಇರಬೇಕಾದ್ದು ಅನಿವಾರ್ಯ. ಇತ್ತೀಚಿನ ದಿನಗಳಲ್ಲಿ ಮಕ್ಕಳ ಹಕ್ಕು ರಕ್ಷಣಾ ಕಾನೂನುಗಳಿಂದಾಗಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಏನೂ ಹೇಳದೆ, ಕೇಳದೆ, ನೋಡದೆ ಅವರನ್ನು ರೂಪಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಶಿಕ್ಷಕರು ಈ ಸವಾಲನ್ನು ಸಮರ್ಥವಾಗಿ ಎದುರಿಸುತ್ತಾರೆಂಬ ವಿಶ್ವಾಸವಿದೆ. ನಮ್ಮೆಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು, ಹಾಗೂ ಓದುಗರಿಗೆ ದೀಪಾವಳಿ, ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆಯ ಶುಭಾಶಯಗಳು.

ಹೆಣ್ಣು ಮಕ್ಕಳ ಶಿಕ್ಷಣದ ಹಕ್ಕಿಗಾಗಿ ಹೋರಾಡಿದ ಕುಮಾರಿ ಮಲಾಲಾ ಹಾಗೂ ಬಾಲ ಕಾರ್ಮಿಕರ ಏಳಿಗೆಗಾಗಿ ಶ್ರಮಿಸಿದ ಶ್ರೀ ಸತ್ಯಾರ್ಥರಿಗೆ ನೊಬೆಲ್ ಪ್ರಶಸ್ತಿ ಸಂದಿರುವುದು ಅತ್ಯಂತ ಸಂತೋಷದ ವಿಷಯ. ಅವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸೋಣ.

ಸಂಪಾದಕ



"ಈ ಜಗತ್ತಿನಲ್ಲಿ ಮನುಷ್ಯನ ಪ್ರಾಣಕ್ಕಿಂತ ಶ್ರೇಷ್ಠವಾದ ವಸ್ತುವೊಂದಿದೆ. ಅದರ ಹೆಸರು ಪರಮೇಶ್ವರ. ಅದರಿಂದಾಗಿಯೇ ನಾವು ಚಿಕ್ಕ, ದೊಡ್ಡ ಕಾರ್ಯಗಳನ್ನು ಮಾಡುತ್ತಿರುತ್ತೇವೆ."

- ರಾಮತೀರ್ಥರು

(1873-1906)

# ಪರಿವಿಡಿ


- ಮನವಿ ಪತ್ರ 3
- ಬರಹಗಾರರ ಕಮ್ಮಟ 4
- ವಿಜ್ಞಾನ ಮತ್ತು ಯಂತ್ರಕಲಾ ಶಾಸ್ತ್ರದಲ್ಲಿ ಭಾರತೀಯರ ಸಾಧನೆ 5
- ಮಕ್ಕಳ ದಿನಾಚರಣೆ ಮತ್ತು ನಮ್ಮ ಹೊಣೆ 6
- ಶಿಕ್ಷಣದ ಗುರಿ ಹೀಗಿರಲಿ 7
- ಶಿಕ್ಷಣದಲ್ಲಿ ಜೀವನ ಮೌಲ್ಯಗಳು: ಕಾರ್ಯಾಗಾರ 9
- ವಿದ್ಯಾರ್ಥಿ ಮಿತ್ರ – 12 10
- ಕನ್ನಡ ರಾಜ್ಯೋತ್ಸವ 11

# ಶೈಕ್ಷಿಕ ಮಹಾಸಂಘದಿಂದ ರಾಷ್ಟ್ರಾಧ್ಯಕ್ಷರು, ಪ್ರಧಾನಮಂತ್ರಿಗಳು, ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿಗಳು, ಕರ್ನಾಟಕ ಮಾನ್ಯ ಮುಖ್ಯಮಂತ್ರಿಗಳು, ಶಿಕ್ಷಣ ಮಂತ್ರಿಗಳಿಗೆ ಸಲ್ಲಿಸಿದ ಮನವಿ ಪತ್ರ

ದೆಹಲಿಯಲ್ಲಿ ಕೇಂದ್ರವಾಗುಳ್ಳ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ಭಾರತದ 20 ರಾಜ್ಯಗಳಿಗೂ ಅಧಿಕ ರಾಜ್ಯಮಟ್ಟದ ಶಿಕ್ಷಕ ಸಂಘಟನೆಗಳಿಂದ ಸಂಲಗ್ನಗೊಂಡಿರುವ ಭಾರತದ ಏಕೈಕ ದೊಡ್ಡ ಶಿಕ್ಷಕ ಸಂಘಟನೆ. ಪ್ರೈಮರಿ, ಸೆಕೆಂಡರಿ ವಿಶ್ವವಿದ್ಯಾನಿಲಯಗಳ 60 ಲಕ್ಷ ಶಿಕ್ಷಕ ಸದಸ್ಯರನ್ನು ಎಬಿಆರ್‌ಎಸ್‌ಎಂ ಹೊಂದಿದೆ. ಸೆಪ್ಟಂಬರ್ 20 ರಂದು ಏಕ ಕಾಲಕ್ಕೆ ಇಡೀ ದೇಶದಲ್ಲಿ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮೂಲಕ ಸೆಕೆಂಡರಿ ಶಿಕ್ಷಕರ ಬೇಡಿಕೆ ಪತ್ರವನ್ನು ಆಯಾ ರಾಜ್ಯಗಳ ಸರ್ಕಾರಕ್ಕೆ ತಲುಪಿಸಲಾಯಿತು. ಕೇಂದ್ರ ಪದಾಧಿಕಾರಿಗಳ ತಂಡವು ಕೇಂದ್ರ ಮಾನವ ಸಂಪನ್ಮೂಲ ಸಚಿವೆ ಶ್ರೀಮತಿ ಸ್ಮೃತಿ ಇರಾನಿ ಅವರನ್ನು ಭೇಟಿ ಮಾಡಿ ಮನವಿ ಪತ್ರವನ್ನು ಸಲ್ಲಿಸಿದಾಗ ಆಕೆ ಮನವಿಗೆ ಸೂಕ್ತವಾಗಿ ಸ್ಪಂದಿಸುವುದಾಗಿ ಆಶ್ವಾಸನೆ ನೀಡಿದರು.

## ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಶಿಕ್ಷಕ ವರ್ಗದ ಬೇಡಿಕೆ ಪತ್ರ


1. ಸ್ವಾಯತ್ತಯುಳ್ಳ ಮಾಧ್ಯಮಿಕ ಶಿಕ್ಷಣ ಆಯೋಗ ಕೇಂದ್ರ ಮತ್ತು ರಾಜ್ಯಸ್ತರಗಳಲ್ಲಿ ರಚನೆ ಆಗಬೇಕು.
2. ಮುಂಗಡ ಪತ್ರದಲ್ಲಿ ಜಿಡಿಪಿಯ 10% ಅನುದಾನವನ್ನು ಕೇಂದ್ರ ಸರ್ಕಾರ ಮತ್ತು 30% ಅನುದಾನವನ್ನು ರಾಜ್ಯ ಸರ್ಕಾರ ಶಿಕ್ಷಣಕ್ಕೆ ನೀಡುವುದು.
3. ರಾಷ್ಟ್ರೀಯತೆ ಬೋಧಿಸುವ ಮತ್ತು ಭಾರತೀಯ ಜೀವನ ಮೌಲ್ಯಗಳುಳ್ಳ ಶಿಕ್ಷಣಕ್ಕೆ ಒತ್ತು ನೀಡಿ ಶಿಕ್ಷಣ ಪದ್ಧತಿಯನ್ನು ಪುನಃ ರಚಿಸುವುದು.
4. ಕೇಂದ್ರ ಸರ್ಕಾರಕ್ಕೆ ಸಮಾನವಾದ ವೇತನ ಎಲ್ಲಾ ರಾಜ್ಯಗಳ ಮಾಧ್ಯಮಿಕ ಶಿಕ್ಷಕರಿಗೆ ನೀಡುವುದು.
5. ಹೊಸ ಪೆನ್ಷನ್ ಯೋಜನೆ ವಾಪಸ್ಸು ಪಡೆದು 2004 ರಿಂದ ನೀಡುತ್ತಿರುವ ಹೊಸ ಪೆನ್ಷನ್ ಯೋಜನೆಯ ಬದಲಿಗೆ ಹಳೆ ಪೆನ್ಶನ್ ಯೋಜನೆ ಪುನಃ ಜಾರಿಗೊಳಿಸುವುದು. ಶಿಕ್ಷಕ ಆರ್ಥಿಕ ಸಮಸ್ಯೆಯಿಂದ ಸ್ವತಂತ್ರನಾಗುವುದು.
6. ಸಾವಿರಾರು ಹುದ್ದೆಗಳು ಖಾಲಿ ಇದ್ದು, ಶೀಘ್ರವೇ ಭರ್ತಿಮಾಡುವುದು. ಇದರಿಂದ ಶಿಕ್ಷಣದ ಗುಣಮತ್ತತೆ ಸುಧಾರಿಸಲು ಸಾಧ್ಯವಾಗುವುದು.
7. ದೈಹಿಕ ಶಿಕ್ಷಕ ಮತ್ತು ವ್ಯವಸಾಯಿಕ ಶಿಕ್ಷಕರ ಭರ್ತಿಯನ್ನು ಮಾಡುವುದು.
8. ಸಮಾನ ಕೆಲಸಕ್ಕೆ ಸಮಾನ ವೇತನ ಸಿದ್ಧಾಂತ ಜಾರಿಗೊಳಿಸುವುದು. ದೇಶಾದ್ಯಂತ ಏಕರೂಪ ವೇತನ ಶ್ರೇಣಿಯನ್ನು ನೀಡುವುದು.
9. ಹೆಚ್ಚು ಖಾಸಗೀ ಶಾಲಾ/ ಕಾಲೇಜುಗಳಿಂದ ಶಿಕ್ಷಣದ ವ್ಯಾಪಾರೀಕರಣ ಆಗುತ್ತಿದ್ದು ಅದನ್ನು ನಿಲ್ಲಿಸುವುದು. ಸರ್ಕಾರಿ ಮತ್ತು ಅನುದಾನಿತ ಸಂಸ್ಥೆಗಳನ್ನು ಸದೃಢಗೊಳಿಸುವುದು.
10. ಶಿಕ್ಷಕರಿಗೆ ಆರೋಗ್ಯ ವಿಮೆ ಜಾರಿಗೊಳಿಸುವುದು.
11. ಸರ್ಕಾರಿ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ಮಧ್ಯೆ ತಾರತಮ್ಯ ಮಾಡದೆ ಸರ್ಕಾರ ನೀಡುವ ಎಲ್ಲಾ ಸವಲತ್ತುಗಳನ್ನು ಅನುದಾನಿತ ಸಂಸ್ಥೆಗಳಿಗೂ ವಿಸ್ತರಿಸುವುದು.
12. ಶಿಕ್ಷಣವು ಸಂಪೂರ್ಣ ಸ್ವತಂತ್ರದಿಂದ ಕೂಡಿರಬೇಕು. ಶಿಕ್ಷಣದ ಎಲ್ಲಾ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ಶಿಕ್ಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು.
13. ಶಿಕ್ಷಕರ ನಿಯುಕ್ತಿಯ ಸಲುವಾಗಿ ಅನೇಕ ಪರೀಕ್ಷೆಗಳನ್ನು ನಡೆಸುವುದು ನಿಲ್ಲಿಸಬೇಕು.
14. ಇಡೀ ದೇಶದಲ್ಲಿ ನಿವೃತ್ತಿಯ ವಯಸ್ಸು 65ಕ್ಕೆ ಹೆಚ್ಚಿಸುವುದು.
15. ಮಾಧ್ಯಮಿಕ ವರ್ಗದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವುದು.
16. ಶಿಕ್ಷಕರನ್ನು ಶಿಕ್ಷಣ ಕೆಲಸ ಬಿಟ್ಟು ಬೇರೆ ಕೆಲಸಗಳಿಂದ ದೂರ ಇಡುವುದು.
17. ಪದನ್ನೋತಿ ನಿಯಮಗಳನ್ನು ಸರಳೀಕರಿಸುವುದು.
18. ಅನುಕಂಪ ಆಧಾರಿತ ಕೆಲಸ ನೀಡುವುದು ಮತ್ತು ಎಲ್ಲಾ ರಾಜ್ಯಗಳಿಗೂ ವಿಸ್ತರಿಸುವುದು.

●

## ಭಾವಪೂರ್ಣ ಶ್ರದ್ಧಾಂಜಲಿ

**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಮಂಗಳೂರು ವಿಭಾಗದ ಪ್ರಮುಖರಾದ ಶ್ರೀ ಎಸ್.ಡಿ. ಶಿವರಾಂರವರ ಧರ್ಮಪತ್ನಿ ಹಾಗೂ ರೈಲ್ವೆ ಮಂತ್ರಿಗಳಾದ ಶ್ರೀ ಡಿ. ವಿ. ಸದಾನಂದ ಗೌಡರವರ ಸಹೋದರಿಯಾದ ಶ್ರೀಮತಿ ಸಾವಿತ್ರಿ ಶಿವರಾಂರವರು ದಿನಾಂಕ 7.10.2014 ರಂದು ಅನಾರೋಗ್ಯದ ನಿಮಿತ್ತ ಇಹಲೋಕವನ್ನು ತ್ಯಜಿಸಿದರು. ಅವರು ಸುಳ್ಯ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಿ ಮತ್ತು ಹಾಲಿ ಪಂಚಾಯಿತಿ ಸದಸ್ಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು, ನಮ್ಮ ಸಂಘದ ಚಟುವಟಿಕೆಗಳಿಗೆ ಸಹಕಾರಿಯಾಗಿದ್ದರು. ಮೃತರ ಆತ್ಮಕ್ಕೆ ಸದ್ಗತಿ ನೀಡಲೆಂದು ಶಿಕ್ಷಕ ಸಂಘದ ರಾಜ್ಯದ ಎಲ್ಲಾ ಪದಾಧಿಕಾರಿಗಳು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.**

# ಬರಹಗಾರರ ಕಮ್ಮಟ



ಲಕ್ಷ್ಮಿ ಜಿ.ಆರ್.
ಬೆಂಗಳೂರು

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ ಯಶಸ್ವಿಗೊಳಿಸಿರುವುದು ಹೆಮ್ಮೆಯ ಸಂಗತಿ. ಇದೇ ನಿಟ್ಟಿನಲ್ಲಿಯೇ ಈ ಬಾರಿ ಶಿಕ್ಷಕಿ ಯರಿಗಾಗಿ "ಬರಹಗಾರರ ಕಮ್ಮಟ"ವನ್ನು ಆಯೋಜಿಸಲಾಗಿತ್ತು. ಅನೇಕ ಸ್ಥಳಗಳಿಂದ ಶಿಕ್ಷಕಿಯರು ಹೆಚ್ಚಿನ ಆಸಕ್ತಿಯಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶಿಬಿರಾರ್ಥಿಗಳು ತಮ್ಮಲ್ಲಿನ ವಿದ್ಯಾರ್ಥಿ ಪ್ರಜ್ಞೆಯನ್ನು ಎಚ್ಚರಗೊಳಿಸಿ ಇಲ್ಲಿ ವಿದ್ಯಾರ್ಥಿ ಗಳಾಗಿದ್ದು ಕಾರ್ಯಕ್ರಮದ ವಿಶೇಷತೆ.

ಕಾರ್ಯಕ್ರಮವನ್ನು ಜ್ಯೋತಿ ಬೆಳಗುವುದರ ಮೂಲಕ ಪ್ರಾರಂಭಿಸಲಾಯಿತು. ಶ್ರೀ. ಕೃಷ್ಣಮೂರ್ತಿ, ಪ್ರೊ. ಕೃ. ನರಹರಿ, ಡಾ॥ ಎಸ್.ಆರ್ ಲೀಲಾರವರು ಉಪಸ್ಥಿತರಿದ್ದರು. ಇದು 'ಕತ್ತಲಿನಿಂದ–ಬೆಳಕಿನೆಡೆಗೆ, ಜ್ಞಾನದಿಂದ–ಅಭಿವೃದ್ಧಿಯ ಕಡೆಗೆ, ಲೇಖನಿಯಿಂದ–ಬರಹದ ಕಡೆಗೆ ಎಂಬ ಸಂದೇಶದ ಪ್ರತೀಕ ವಾಗಿತ್ತು. ಕಾರ್ಯಕ್ರಮವನ್ನು ಮೂರು ಹಂತಗಳಲ್ಲಿ ನಡೆಸ ಲಾಯಿತು. ಪ್ರಾರಂಭದಲ್ಲಿ ನಂ ನಾಗಲಕ್ಷ್ಮಿಯವರು ಗಣ್ಯರಿಗೆ ಸ್ವಾಗತವನ್ನು ಕೋರಿ ಬರಹಗಾರ ಕಮ್ಮಟದ ಉದ್ದೇಶ ಮತ್ತು ಕಾರ್ಯಕ್ರಮದ ಪ್ರಮುಖ ಘಟ್ಟಗಳ ಬಗ್ಗೆ ಪರಿಚಯಿಸಿದರು.

ಪ್ರೊ. ನರಹರಿಯವರು, ಶಿಕ್ಷಕಿಯರನ್ನು ಕುರಿತು, ಲೇಖನ ಗಳನ್ನು ಬರೆಯುವ ಹಿನ್ನಲೆಯ ಬಗ್ಗೆ ಬರಹಗಾರರ ಕಮ್ಮಟದಲ್ಲಿ ಮಾತನಾಡಿದರು. ಲೇಖನಗಳಿಗೆ ಬೇಕಾದ ಅವಶ್ಯಕ ಅಂಶಗಳು. ಲೇಖನಿಯ ಮಹತ್ವವನ್ನು ಎಲ್ಲರಿಗೂ ಪರಿಚಯಿಸಿದರು. ಸರಳಭಾಷೆ, ಘನಾತ್ಮಕ ಭಾವನೆ, ಸಂದೇಶ, ಸನಾತನ ಸಂಸ್ಕೃತಿ, ಸತ್ಯ ಮತ್ತು ವಾಸ್ತವ, ಸೌಜನ್ಯ ಮುಂತಾದವುಗಳು ಲೇಖನಗಳ ಪ್ರಮುಖ ಅಂಶಗಳೆಂದು ವಿವರಿಸಿದರು. ಸತ್ಯಶೋಧನೆ, ಹಾಸ್ಯ, ಇತಿಹಾಸ, ಸಾಂದರ್ಭಿಕ ಘಟನೆಗಳು, ಜೀವನಚರಿತ್ರೆಗಳು ಲೇಖನಗಳಿಗೆ ಆಧಾರವಾಗಬಲ್ಲವು ಎಂಬ ಸಂಗತಿಯನ್ನು ಎಲ್ಲರ ಗಮನಕ್ಕೆ ತಂದರು. ಸಾಮಾನ್ಯರಲ್ಲಿನ ಅಸಾಮಾನ್ಯ ಗುಣಗಳನ್ನು ಗುರುತಿಸಿ, ಗೌರವಿಸುವ ಪರಿಶುದ್ಧ ಮನಸ್ಥಿತಿಯು ನಮ್ಮದಾಗಬೇಕೆಂಬ ಅವರ ನಿಲುವು ಎಲ್ಲರಲ್ಲಿಯೂ ಮೆಚ್ಚುಗೆ ಹುಟ್ಟಿಸಿತು.

ಡಾ॥ ಎಸ್.ಆರ್. ಲೀಲಾರವರ ಸಾಧನೆಯ ಕಿರುಪರಿಚಯ ವಾದ ಬಳಿಕ, ಚಿಂತನಾತ್ಮಕ ಲೇಖನದ ಕುರಿತು ತಿಳಿಯ ಪಡಿಸಬೇಕಾಗಿ ಮನವಿ ಮಾಡಲಾಯಿತು. "ಚೊಕ್ಕದಾದ ಜಾಗ, ಚಿಕ್ಕ ಕಾರ್ಯಕ್ರಮ, ವಿಶಾಲ ಮನಸ್ಸು ಮತ್ತು ಉತ್ತಮ ಉದ್ದೇಶದ ಸಮ್ಮಿಲನದೊಂದಿಗೆ ಕಾರ್ಯಕ್ರಮ ಅಚ್ಚುಕಟ್ಟಾಗಿ ಸಾಗುತ್ತಿತ್ತು. ಎಲ್ಲರಲ್ಲಿಯೂ ಜ್ಞಾನಿಗಳ, ವಿಚಾರವಂತರ ಜೊತೆಗಿನ ಸಂವಾದ ಜೀವನದಲ್ಲಿ ಭಿನ್ನ ಮತ್ತು ಅವಶ್ಯಕ ಎಂಬುದರ ಅರಿವು ಮೂಡಿತು. ಅವರಂತೆಯೇ ಡಾ॥ ಎಸ್. ಆರ್. ಲೀಲಾ ರವರು ತಮ್ಮ ಜ್ಞಾನಭಂಡಾರದ ಹೂರಣ ವನ್ನು ಎಲ್ಲರಿಗೂ ತಮ್ಮ ಮಾತಿನ ಮೂಲಕ ಉಣಬಡಿಸಿದರು. ಅವರ ಮಾತುಗಳು ಎಲ್ಲರ ಉತ್ಸುಕತೆಯನ್ನು ಮತ್ತಷ್ಟು ಹುರಿದುಂಬಿಸಿತು. ಅವರ ಜೀವನದಲ್ಲಿ ಅಂತರಂಗಧ್ವನಿಗೆ ಅವರು ಕೊಟ್ಟ ಪ್ರಾಶಸ್ತ್ಯ ಮತ್ತು ಅದರೊಂದಿಗಿನ ತೃಪ್ತಿದಾಯಕ ಬದುಕು ಸಾಗುತ್ತಿರುವುದಾಗಿ ಎಲ್ಲರೊಟ್ಟಿಗೆ ಹಂಚಿಕೊಂಡರು. "ಇಷ್ಟಪಟ್ಟರೆ ಕಾರ್ಯಸಿದ್ಧಿ ಸಾಧ್ಯ ಮತು ಸಿದ್ಧಿಗೆ ಮುನ್ನ ಸಿದ್ಧತೆ" ಮುಖ್ಯ ಎಂಬ ಅವರ ಅಂಶಗಳು ಎಲ್ಲರನ್ನೂ ಪ್ರಭಾವಿಗೊಳಿಸಿದವು. ಒಂದು ವಿಷಯದ ಕುರಿತು ತಿಳಿಯಲು ವ್ಯಾಪಕ ಅಧ್ಯಯನ, ಚಿಕಿತ್ಸಾತ್ಮಕ ಅಧ್ಯಯನ ಜೊತೆಗೆ ಪ್ರೀತಿ, ಕುತೂಹಲ, ಆಸಕ್ತಿ, ಅವಶ್ಯಕ ಎಂಬುದನ್ನು ಸ್ಪಷ್ಟಪಡಿಸಿದರು. ಚಿಂತನಾತ್ಮಕ ಲೇಖನದ ಕುರಿತಾಗಿ ಸವಿಸ್ತಾರವಾಗಿ ವಿವರಣೆ ನೀಡಿದರು.

ಎರಡನೇ ಅವಧಿಯಲ್ಲಿ ಶ್ರೀಮತಿ ವರಲಕ್ಷ್ಮಿರವರು ಸಂಪನ್ಮೂಲ ವ್ಯಕ್ತಿಯಾದ ಶ್ರೀ ನ.ನಾಗರಾಜ್, ರವರನ್ನು ಪರಿಚಯಿಸಿ ಸ್ವಾಗತಿಸಿದರು. ಇವರು ವ್ಯಕ್ತಿ ಚಿತ್ರಣದ ಕುರಿತು ನಿಖರವಾಗಿ ಎಲ್ಲರಿಗೂ ತರಬೇತಿ ನೀಡಿದರು. "ಒಂದು ಪೆನ್ಸಿಲ್‌ನ ಕಥೆ" ಎಂಬ ಕಥೆಯಿಂದ ಪ್ರಾರಂಭವಾದ ಅವರ ಪಾಠ ಎಲ್ಲರನ್ನೂ ಪೆನ್ನು ಹಿಡಿಯುವಂತೆ ಮಾಡಿತು. ಅಂತರಾಳ, ಸಿದ್ಧತೆ, ತಿದ್ದುಪಡಿ, ಜೀವನಕಾರ್ಯ, ನಿರಹಂಕಾರವೆಂಬ 5 ಅಂಶಗಳನ್ನೊಳಗೊಂಡ ಪೆನ್ಸಿಲ್ ಅವುಗಳ (ಮಾನವೀಯ ಮೌಲ್ಯಗಳ) ಕುರಿತು ಮನುಷ್ಯನಿಗೆ ಪಾಠ ಹೇಳುವುದು ಕಥೆಯ ತಿರುಳಾಗಿತ್ತು. ಪೆನ್ಸಿಲ್‌ನ ಜಾಣತನ ಮೆಚ್ಚಿಕೊಂಡ ಎಲ್ಲರೂ ಅವರ ಮಾತಿಗೆ ಮನಸೋತರು. ಓದಲೇಬೇಕಾದಂತಹ ಕೆಲವು ವ್ಯಕ್ತಿ ಕೃತಿರಚನೆಗಳ ಬಗ್ಗೆ ಪರಿಚಯಿಸಿದರು. ಮಾಹಿತಿ ಸಂಗ್ರಹ, ಪ್ರಯೋಗ, ಅಧ್ಯಯನಶೀಲತೆ, ಮನೋಶಿಕ್ಷಣ, ಹೊಸತನ, ನಿಖರತೆ, ಸ್ಪಷ್ಟತೆ, ಕ್ರಿಯಾಶೀಲತೆ, ಅಧ್ಯಯನ ಹೀಗೆ ಹತ್ತು ಹಲವು ಅಂಶಗಳನ್ನೊಳ ಗೊಂಡಿರಬೇಕೆಂಬುದಾಗಿ ವ್ಯಕ್ತಿ ಚಿತ್ರಣ ಲೇಖನಗಳ ಕುರಿತಾಗಿ ತರಬೇತಿ ನೀಡಿದರು. "ಮಾತಿಗಿಂತ ಕೃತಿ ಮುಖ್ಯ" ಹಾಗಾಗಿ ಸಾಧ್ಯವಾದಷ್ಟು ಲೇಖನಿಗೆ ಕೆಲಸ ಕೊಡಿ, ಬರಹಗಳಿಗೆ ಒತ್ತುಕೊಡಿ ಎಂದು ಮನವಿ ಮಾಡಿದರು.

ನಂತರದಲ್ಲಿ ವಿಕ್ರಮಪತ್ರಿಕೆ ಸಂಪಾದಕರಾದ ದು.ಗು. ಲಕ್ಷ್ಮಣ್ ರವರು ತಮ್ಮ ಮಾತನ್ನು ಮುಂದುವರೆಸಿದರು. ಒಬ್ಬ ಪತ್ರಕರ್ತನ ಬದುಕಿನ ನೈಜಚಿತ್ರಣವನ್ನು ಎಲ್ಲರಿಗೂ ಕಟ್ಟಿಕೊಟ್ಟರು. ವರದಿಯ ರಚನೆಯ ಕುರಿತಾದ ಅವರ ತರಬೇತಿ ಸರಾಗವಾಗಿ ಸಾಗಿತ್ತು. ಶೀರ್ಷಿಕೆ, ವಿವರಣೆ, ಉಪಸಂಹಾರ ಪ್ರಮುಖ ಅಂಶಗಳಾಗಿದ್ದು

ಪುಟ 8 ಕ್ಕೆ ➢

# ವಿಜ್ಞಾನ ಮತ್ತು ಯಂತ್ರಕಲಾ ಶಾಸ್ತ್ರದಲ್ಲಿ ಭಾರತೀಯರ ಸಾಧನೆ

➢ ಕಳೆದ ಸಂಚಿಕೆಯಿಂದ....

**ಪೃಥ್ವಿ :** ಪುಣೆಯಲ್ಲಿರುವ ಭಾರತೀಯ ಸಂಕ್ರಾಂತಿ ಉಷ್ಣವಲಯದ ಪವನಶಾಸ್ತ್ರ ಸಂಸ್ಥೆ. (IndianInstitute of TropicalMeteorology, pune) ಹೆಚ್ಚಿನ ಗುಣಮಟ್ಟದ ಗಣಕಯಂತ್ರ ಹೊಂದಿದೆ. ಇದು ಪೃಥ್ವಿ. ಇದರ ಗಣಕವೇಗ 1 ಸೆಕೆಂಡಿಗೆ 790.7 ಟೆರಾಫ್ಲೋಪ್ಸ್. ಇದನ್ನು ವಾತಾವರಣ ಕುರಿತಾದ ಸಂಶೋಧನೆ ಮತ್ತು ವಾತಾವರಣದ ಮುನ್ಸೂಚನೆ ಕೊಡಲು ಬಳಸುತ್ತಾರೆ. ಇದು ಪ್ರಪಂಚದ ಅತಿ ಶ್ರೇಷ್ಠ ಕಂಪ್ಯೂಟರ್ ಯಂತ್ರಗಳಲ್ಲಿ 36 ನೇಯದೆಂದು ಜೂನ್ 2013 ರಲ್ಲಿ ಗುರುತಿಸಲಾಗಿದೆ.

**ಪರಂ ಯುವ –2:** 2013ರ ಫೆಬ್ರವರಿ 8ರಂದು ಉದ್ಘಾಟನೆಯಾದ ಗಣಕಯಂತ್ರದ ರಚನೆ ಹೆಚ್ಚಿನ ಗುಣಮಟ್ಟದ ರಚನಾ ಸಂಸ್ಥೆ ಸಿದ್ಧಪಡಿಸಿದೆ. ಇದಕ್ಕೆ ಆ ಸಂಸ್ಥೆ ತೆಗೆದುಕೊಂಡ ಕಾಲ ಕೇವಲ 3 ತಿಂಗಳು ಮತ್ತು ಖರ್ಚು 160 ದಶಲಕ್ಷ ರೂಗಳು (ಅಂದರೆ ಅಮೇರಿಕಾದ 3 ದಶಲಕ್ಷ ಡಾಲರ್). ಇದರ ಅಧಿಕ ವೇಗ 1 ಸೆಕೆಂಡಿಗೆ 524 ಟೆರಾಪ್ಲೋಪ್ಸ್. ಈಗ ಇರುವುದಕ್ಕಿಂತ 10 ರಷ್ಟು ಹೆಚ್ಚಿನ ವೇಗ ಮತ್ತು ಪ್ರತಿಶತ 35 ರಷ್ಟು ಕಡಿಮೆ ಶಕ್ತಿ ಬಳಕೆ ಮಾಡುತ್ತದೆ. ಸಿ.ಡಿ.ಎ.ಸಿ ಸಂಸ್ಥೆಯ ಪ್ರಕಾರ ಇದರ ವೇಗ 360.8 ಟೆರಾಫ್ಲೋಪ್ಸ್ ಪ್ರತಿ ಸೆಕೆಂಡಿಗೆ. ಇದುವರೆಗಿನ ಕಂಪ್ಯೂಟರ್ ಪಟ್ಟಿಯಲ್ಲಿ 500 ಗಣಕಯಂತ್ರಗಳಲ್ಲಿ ಇದರ ಸ್ಥಾನ 62. ಶಕ್ತಿ ಸಾಮರ್ಥ್ಯದ ಗಣನೆಯಲ್ಲಿ ನವೆಂಬರ್ 2012 ರ 500 ಸೂಪರ್ ಕಂಪ್ಯೂಟರ್ ಪಟ್ಟಿಯಲ್ಲಿ ಇದರ ಸ್ಥಾನ 33ನೆಯದು ಆಗಿರುತ್ತದೆ. ಜಗತ್ತಿನಲ್ಲಿರುವ 500 ಟೆರಾಫ್ಲೋಪ್ಸ್ ಪ್ರತಿ ಸೆಕೆಂಡಿಗೆ ಸೂಪರ್ ಕಂಪ್ಯೂಟರ್‌ಗಳಲ್ಲಿ ಇದು ಮೊದಲ ಭಾರತೀಯ ಗಣಕಯಂತ್ರ.

**ಪರಂ ಯುವ–2** ಅನ್ನು ಅಂತರಿಕ್ಷ ಸಂಶೋಧನೆ, ಜೀವ ಸಮಾಚಾರಶಾಸ್ತ್ರ, ವಾತಾವರಣ ಮುನ್ಸೂಚನೆ, ಭೂಕಂಪನ ಅಧ್ಯಯನ, ವೈಮಾನಿಕ ತಂತ್ರಜ್ಞಾನ, ಔಷಧೀಯ ವಿಜ್ಞಾನ ಬೆಳವಣಿಗೆಗೆ ಬಳಸಲಾಗುತ್ತದೆ. ಭಾರತದಲ್ಲಿ ಉನ್ನತ ಮಟ್ಟದ ತಾಂತ್ರಿಕ ವಿದ್ಯಾಸಂಸ್ಥೆಗಳಾದ ಭಾರತೀಯ ತಾಂತ್ರಿಕ ಸಂಸ್ಥೆ, ರಾಷ್ಟ್ರೀಯ ತಾಂತ್ರಿಕ ಸಂಸ್ಥೆ, ಇವೆಲ್ಲವನ್ನೂ ಸೂಪರ್‌ನ ಜ್ಞಾನ ಬಳಕೆಯ ಸಂಪರ್ಕ ಸಾಲಿನಲ್ಲಿ ಜೋಡಿಸಿ ಭವಿಷ್ಯತ್ತಿನ ಪೆಟಾಫ್ಲೋಪ್ ಸಾಮರ್ಥ್ಯದ ಸೂಪರ್ ಕಂಪ್ಯೂಟರ್‌ಗಳ ರಚನೆ ಭಾರತದಲ್ಲಿ ಸಾಧ್ಯವಾಗಬಹುದು.

**ಸಗಾ–220:–** ಇದು ಇಸ್ರೊನ ತಯಾರಿಕೆ. ಪ್ರತಿಸೆಕೆಂಡಿಗೆ 200 ಟೆರಾಫ್ಲೋಪ್ಸ್ ನಿರ್ವಹಣಾ ಸಾಮರ್ಥ್ಯ ಹೊಂದಿದೆ. ಇದು 400 NVIDIA TESLA, 2070 GPs and 400 Intel Quad Core Xeon CPUs ಬಳಸಿದೆ.

**ಏಕ:** ಈ ಗಣಕಯಂತ್ರವನ್ನು ಗಣಕ ಸಂಶೋಧನಾಲಯ ಸಂಸ್ಥೆಗಳು ಮತ್ತು Hewlett-Packard ಸಂಸ್ಥೆಯ ತಾಂತ್ರಿಕ ಸಹಕಾರದೊಂದಿಗೆ ತಯಾರಿಸಲಾಗಿದೆ. ಇದರ ಬೆಳವಣಿಗೆ ಯಲ್ಲಿ ಮುಖ್ಯವಾದವು ಟಾಟಾ ಸಂಸ್ಥೆ. ಇದರ ಸಾಮರ್ಥ್ಯ ಸೆಕೆಂಡಿಗೆ 132800 ಗೀಗಾಫ್ಲೋಪ್ಸ್. ಅಥವ 132 ಟೆರಾಫ್ಲೋಪ್ಸ್ ಪ್ರತಿ ಸೆಕೆಂಡಿಗೆ.

**ವಿರ್ಗೋ: –** ಚೆನ್ನೈನಲ್ಲಿರುವ ಭಾರತೀಯ ತಂತ್ರಶಾಸ್ತ್ರ ಸಂಸ್ಥೆ ಈ ವಿರ್ಗೋವನ್ನು ತಯಾರಿಸಿದೆ. ಇದು ಜಗತ್ತಿನ ಹಾಲಿ ಸೂಪರ್‌ಗಣಕ ಯಂತ್ರಗಳಲ್ಲಿ 364ನೇ ಸ್ಥಾನ ಹೊಂದಿದೆ. ಇವುಗಳಲ್ಲಿ 292 ಗಣಕ nodes, 2 ಗುರು nodes ಗಳನ್ನು ಹೊಂದಿದ್ದು, 97 ಟೆರಾಫ್ಲೋಪ್ಸ್ ಗಣಕ ಶಕ್ತಿಯನ್ನು ಹೊಂದಿದೆ.

Linpack ನ ಪ್ರಕಾರ ಇದು ವಿದ್ಯಾಸಂಸ್ಥೆಗಳಲ್ಲಿ ಅತಿ ಹೆಚ್ಚು ವೇಗದಿಂದ ಇದರ ನಿರ್ವಹಣೆ Rmox ಅನ್ನು ಇದರ ವೇಗ 91.126 ಟಿ.ಎಫ್ ಮತ್ತು Rpeak ನಲ್ಲಿ 97.843 ಟಿ.ಎಫ್ ಇದರ ಗಣಕ ಸಾಮರ್ಥ್ಯ 932 Expand (Mflop/ Watt) ಇದು ಪ್ರಪಂಚದ 500 ಶ್ರೇಷ್ಠ ಗಣಕ ಯಂತ್ರಗಳಲ್ಲಿ 224 ನೆಯದಾಗಿದೆ. ಪ್ರಪಂಚದ ಶ್ರೇಷ್ಠ ಶಕ್ತಿ ಸಾಮರ್ಥ್ಯದ ಯಂತ್ರಗಳ ಸಾಲಿನಲ್ಲಿ ವಿರ್ಗೋ 5 ನೆಯದಾಗಿದೆ. ಮತ್ತು ಭಾರತದ ಶ್ರೇಷ್ಠ ಶಕ್ತಿ ಸಾಮರ್ಥ್ಯ ಯಂತ್ರಗಳ ಸಾಲಿನಲ್ಲಿ ಮೊದಲನೆಯದಾಗಿದೆ.

**ಪರಂ ಯುವ:–** ಮುಂದುವರಿದ ಗಣಕ ಯಂತ್ರಗಳ ರಚನೆಯಲ್ಲಿ ಹೆಸರು ಮಾಡಿರುವ C-DAC ಸಂಸ್ಥೆಯು ಅಭಿವೃದ್ಧಿಪಡಿಸಿದ ಪರಂ ಶ್ರೇಣಿಯ ಸೂಪರ್ ಕಂಪ್ಯೂಟರ್. ಇವುಗಳ ವೇಗ ಪ್ರತಿಸೆಕೆಂಡಿಗೆ 54000 ಗಿಗಾ ಫ್ಲೋಪ ಅಥವಾ 54 ಟೆರಾಫ್ಲೋಪ್ ಪ್ರತಿಸೆಕೆಂಡಿಗೆ.

**ಭವಿಷ್ಯದ ಸೂಪರ್ ಗಣಕ ಯಂತ್ರಗಳು:** ಭಾರತ ಸರ್ಕಾರದ ಆಲೋಚನೆಯಲ್ಲಿ 12ನೆಯ ಪಂಚವಾರ್ಷಿಕ ಯೋಜನೆಯಲ್ಲಿ (2012–2017) ಸುಮಾರು 2.5 ಬಿಲಿಯನ್ ಅಮೆರಿಕನ್ ಡಾಲರ್ ಖರ್ಚು ಮಾಡಿ ಭವಿಷ್ಯದ ಸೂಪರ್ ಗಣಕಯಂತ್ರ ರಚನೆ ಜವಾಬ್ದಾರಿಯನ್ನು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಗೆ ವಹಿಸಲಾಗಿದೆ. ಇದರ ಜೊತೆಗೆ ಭವಿಷ್ಯದ ಸೂಪರ್ ಗಣಕಯಂತ್ರಗಳ ಅಭಿವೃದ್ಧಿಯಲ್ಲಿ ಗಣಕ ವೇಗ ಸಾಮರ್ಥ್ಯ ವನ್ನು exaflop ಶ್ರೇಣಿಗಳಲ್ಲಿ ರೂಪಿಸಲು ಯೋಜಿಸಲಾಗಿದೆ. ಇದನ್ನು C-DAC ಮೂಲಕ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಭಾರತದ ಎಲ್ಲಾ ಪ್ರಮುಖ ವಿದ್ಯಾಸಂಸ್ಥೆ ಹಾಗೂ ಸಂಶೋಧನಾ ಸಂಸ್ಥೆಗಳಲ್ಲಿ ಸೂಪರ್ ಗಣಕ ಪರಿವರ್ತಕದಲ್ಲಿ ಸುಮಾರು 70 ಸೂಪರ್ ಗಣಕಯಂತ್ರ ಸಹಾಯದಿಂದ ರಚಿಸಲಾಗುವುದು. ಇವುಗಳಲ್ಲಿ 20 ಗಣಕಯಂತ್ರಗಳು 10 peaflop, ಉಳಿದ ಕೆಲವು 100–500 teraflops ಶ್ರೇಣಿಯಲ್ಲಿ, ಉಳಿದವು ಸಣ್ಣ ಪ್ರಮಾಣದ್ದಾಗಿರುತ್ತದೆ. **– ಪ್ರೊ. ಎಸ್. ವಿ. ಸುಬ್ರಹ್ಮಣ್ಯಂ** ●

# ಮಕ್ಕಳ ದಿನಾಚರಣೆ ಮತ್ತು ನಮ್ಮ ಹೊಣೆ

## (ನವೆಂಬರ್ 14 ಮಕ್ಕಳ ದಿನಾಚರಣೆ, ನವೆಂಬರ್ 20 ಅಂತರ ರಾಷ್ಟ್ರೀಯ ಮಕ್ಕಳ ದಿನ)

**ವಿ. ರಾಜ**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**
**ಬೆಂಗಳೂರು ದಕ್ಷಿಣ ಜಿಲ್ಲೆ ಅಧ್ಯಕ್ಷರು**



ಭಾರತದ ಪ್ರಥಮ ಪ್ರಧಾನಮಂತ್ರಿಗಳಾಗಿದ್ದ ಜವಾಹರ್ ಲಾಲ್ ನೆಹರುರವರಿಗೆ ಮೊದಲಿನಿಂದಲೂ ಮಕ್ಕಳೆಂದರೆ ಬಹಳ ಪ್ರೀತಿ. ಮಕ್ಕಳೊಡನೆ ಆಟವಾಡುವುದೆಂದರೆ ಆನಂದ. ಸ್ವತಂತ್ರ ಭಾರತದ ಪ್ರಧಾನಮಂತ್ರಿಯಾಗಿ ದಿನವಿಡೀ ದುಡಿತವಿದ್ದಾಗಲೂ ಅವರು ಮಕ್ಕಳೊಡನೆ ಆಡುವ ಪ್ರಸಂಗ ತಪ್ಪಿಸುತ್ತಿರಲಿಲ್ಲ. ನವೆಂಬರ್ 14 ರಂದು ಪಂಡಿತ ಜವಾಹರಲಾಲ್ ನೆಹರುರವರ ಜನ್ಮದಿನ. ಅಂದು ಭಾರತದಲ್ಲಿ 'ಮಕ್ಕಳದಿನ' ಎಂದು ಸಂಭ್ರಮದಿಂದ ಪ್ರತಿವರ್ಷ ಆಚರಿಸುತ್ತೇವೆ.

ಜವಾಹರರು ಸಾಹಿತಿಗಳೂ ಆಗಿದ್ದರು. ಚಿಕ್ಕಂದಿನಿಂದಲೂ ಅವರಿಗೆ ಪುಸ್ತಕಗಳನ್ನು ಓದುವುದೆಂದರೆ ಬಹು ಆಸಕ್ತಿ. ದಿನವಿಡೀ ಬೇರೆ ಬೇರೆ ಕೆಲಸಗಳಿಂದ ದಣಿವಾದರೂ ಅವರು ರಾತ್ರಿ ಮಲಗುವ ಮುಂಚೆ ಸ್ವಲ್ಪ ಸಮಯ ಉತ್ತಮ ಪುಸ್ತಕ ಓದುತ್ತಿದ್ದರು. ಅವರಿಂದ ಇಂಗ್ಲೀಷ್ ಭಾಷೆಯಲ್ಲಿ ರಚಿತವಾದ ಮೂರು ಪುಸ್ತಕಗಳು ಜಗತ್ಪ್ರಸಿದ್ಧವಾಗಿವೆ. ಸಹಜವಾಗಿ ಅನುಕಂಪ ತೋರುವ ಹೃದಯ, ಯಾವ ಸಮಸ್ಯೆಯನ್ನೂ ವಿಶಾಲವಾದ ದೃಷ್ಟಿಯಿಂದ ಕಾಣುವ ವಿವೇಕ ಅವರ ಎಲ್ಲ ಪುಸ್ತಕಗಳಲ್ಲಿ ಕಾಣುತ್ತೇವೆ.

ಮಕ್ಕಳ ದಿನಾಚರಣೆಯ ಈ ಸಂದರ್ಭದಲ್ಲಾದರೂ ನಾವು ಮಕ್ಕಳ ಕಲ್ಪನಾಶಕ್ತಿಯನ್ನು, ಜ್ಞಾನ, ಅನುಭವಗಳನ್ನು ವಿಸ್ತರಿಸುವ, ಅವರ ಮನಸ್ಸನ್ನು ಅರಳಿಸುವ ನಿಟ್ಟಿನಲ್ಲಿ ರಂಜನೆ, ಮಾಹಿತಿ, ಶಿಕ್ಷಣ, ಸಮಸ್ಯೆಗಳ ಅರಿವಿನ ವಿಸ್ತರಣೆ ಮತ್ತು ಸಂತೋಷದ ಸಮಯ ಕಂಡುಕೊಳ್ಳುವಲ್ಲಿ ಪತ್ರಿಕೆಗಳನ್ನು ಅವರಿಗೆ ಒದಗಿಸಿ ಅಧ್ಯಯನ ಮಾಡುವಂತೆ ಮಾಡಬೇಕಾದುದು ಅತ್ಯಂತ ಅನಿವಾರ್ಯವಾದುದಾಗಿದೆ. ನಮ್ಮ ಶಿಕ್ಷಕ ಸಮಾಚಾರದಲ್ಲೂ ಮಕ್ಕಳಿಗಾಗಿ ಮಕ್ಕಳ ಮಂಟಪ ಎಂಬ ಪುಟವನ್ನು ಮೀಸಲಿಟ್ಟಿದ್ದೇವೆ.

'ಪುಟಾಣಿ ವಿಜಯ', 'ಕಿಂದರ ಜೋಗಿ', 'ತುಂತುರು' ಮುಂತಾದ ಪುರವಣಿಗಳನ್ನು ಓದುವಂತೆ ಪ್ರೇರಣೆ ನೀಡಬೇಕಾಗಿದೆ.

ಹಾಗೇ ಕನ್ನಡದ ಮಕ್ಕಳಿಗಾಗಿ ಹೊರ ರಾಜ್ಯದಿಂದ ಬರುತ್ತಿರುವ ಪತ್ರಿಕೆಗಳು ಅನೇಕವಿದೆ. ಭಾರತದಲ್ಲಿ ಬಹುಶಃ ಚಂದಮಾಮದಷ್ಟು ಜನಪ್ರಿಯವಾದ ಮಕ್ಕಳ ಪತ್ರಿಕೆ ಇನ್ನೊಂದಿರಲಿಕ್ಕಿಲ್ಲ. 1947 ರಲ್ಲಿ ಪ್ರಾರಂಭಗೊಂಡ ಇದು ನಿರಂತರವಾಗಿ 60 ವರ್ಷಗಳನ್ನು ಯಶಸ್ವಿಯಾಗಿ ದಾಟಿ ನಡೆದುಬರುತ್ತಿದೆ. 2008ರಿಂದ ಈ ಪತ್ರಿಕೆಗೆ ಹೊಸ ಆಯಾಮ ನೀಡಲಾಗಿದೆ. ಭಾಷೆ, ಪ್ರಸ್ತುತಿ, ಚಿತ್ರ, ದೃಶ್ಯ. ಸಂವಹನ, ವಸ್ತು ಎಲ್ಲ ರೀತಿಯಲ್ಲೂ ಹೊಸತನ ಸಾಧಿಸಿದೆ. ಸಮಕಾಲೀನ ಸ್ಪಂದನೆಯ ಕತೆ, ಸಾಹಸ ಸರಣಿ, ಕ್ರೀಡಾ ಸಮಾಚಾರ, ತಾಂತ್ರಿಕ ರಂಗದ ಸುದ್ದಿಗಳು, ವಿಜ್ಞಾನ ಹೀಗೆ ಇವತ್ತಿನ ಮಕ್ಕಳ ನಿರೀಕ್ಷೆಯನ್ನು ಅಚ್ಚರಿಪಡುವಷ್ಟು ಸಮರ್ಥವಾಗಿ ತುಂಬಿಕೊಡುತ್ತಿದೆ. ಸಂವೇದನಾಶೀಲ ಸಾಮಗ್ರಿ ಹಾಗೂ ಶೈಕ್ಷಣಿಕ ಸಾಮಗ್ರಿ ಎಲ್ಲವನ್ನೂ ನೀಡಲು ಈಗ ಪತ್ರಿಕೆ ಸಜ್ಜಾಗಿದೆ. ಈಗ ಸ್ವಲ್ಪ ದೊಡ್ಡ ಮಕ್ಕಳಿಗಾಗಿಯೇ ಪತ್ರಿಕೆಯನ್ನು ಅಚ್ಚುಕಟ್ಟಾಗಿ ರೂಪಿಸಲಾಗುತ್ತಿದೆ. ಈಗ ಇಂಗ್ಲೀಷಲ್ಲದೇ ಕನ್ನಡವನ್ನೂ ಒಳಗೊಂಡಂತೆ ಭಾರತದ ಇತರ 12 ಭಾಷೆಗಳಲ್ಲಿ ಚಂದಮಾಮ ಬರುತ್ತಿದೆ.

ಹಾಗೇ ಹೊರರಾಜ್ಯದಿಂದ ಕನ್ನಡದ ಮಕ್ಕಳಿಗಾಗಿ ಬಾಲಮಿತ್ರ, ಬೊಂಬೆಮನೆ, ಪುಟಾಣಿ ಮುಂತಾದ ನಿಯತಕಾಲಿಕಗಳು ಈಗ ಉಸಿರು ಕಳೆದುಕೊಂಡಿವೆ. ಆದರೆ ಮೂಲ ಕೇರಳದ ಮಂಗಳಂ ಪಬ್ಲಿಕೇಷನ್ಸ್ ಕನ್ನಡದಲ್ಲಿ 'ಬಾಲಮಂಗಳ' ಮತ್ತು 'ಬಾಲಮಂಗಳ ಚಿತ್ರಕಥಾ' ಎಂಬ ಎರಡು ಪಾಕ್ಷಿಕವನ್ನು ಹತ್ತಾರು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು ಇತ್ತೀಚೆಗಿನ ಕೆಲವರ್ಷಗಳಿಂದ ಪುಟಾಣಿ ಮಕ್ಕಳಿಗಾಗಿ 'ಗಿಳಿವಿಂಡು' ಎಂಬ ಮಾಸಿಕವನ್ನು ತರುತ್ತಿದ್ದಾರೆ. ಹಾಗೆ 'ಚಂಪಕ' ಕೂಡ ಮಕ್ಕಳಿಗೆ ಇಷ್ಟವಾದ ಒಳ್ಳೆಯ ಪತ್ರಿಕೆ. ಕಾಮಿಕ್ಸ್ ಎಲ್ಲ ಮಕ್ಕಳ ಪತ್ರಿಕೆಗಳ ಮುಖ್ಯ ಆಕರ್ಷಣೆ. ಹಾಗೇ ರಂಜನೆ, ಮಾಹಿತಿ, ಶಿಕ್ಷಣವೇ ಇವುಗಳ ಮುಖ್ಯ ಗುರಿ. ಸಾಮಾನ್ಯವಾಗಿ ಮಕ್ಕಳು ಎಂದರೆ ನಿರ್ದಿಷ್ಟ ವಯೋವರ್ಗವನ್ನು ಗುರುತಿಸಲಾಗದಿದ್ದರೂ 7 ವರ್ಷದಿಂದ 10–12 ವರ್ಷದವರೆಗಿನ ಮಕ್ಕಳನ್ನು ಇಲ್ಲಿ ಪರಿಗಣಿಸಲಾಗುತ್ತದೆ. ಆದರೆ ಹೈಸ್ಕೂಲ್ ಮಕ್ಕಳಿಗೆ ಇಷ್ಟವಾಗುವ, ಅವರ ಸಮಸ್ಯೆಗಳನ್ನು ಕುರಿತು ಚರ್ಚಿಸುವಂತಹ ವಾಸ್ತವ ಲೋಕದ ಗಂಭೀರ ಸಾಮಗ್ರಿ ಇಲ್ಲಿ ಅಷ್ಟಾಗಿ ಕಾಣುವುದಿಲ್ಲ. ಸುಮಾರಾಗಿ ಹೈಸ್ಕೂಲಿಗೆ ಬಂದ ಮಕ್ಕಳ ಗ್ರಹಿಕೆ ಹಿಗ್ಗುತ್ತಿರುತ್ತದೆ. ಸುತ್ತಲಿನ ಅನೇಕ ಸಂಗತಿಗಳು ಅವರನ್ನು ದಿಗಿಲುಗೊಳಿಸುತ್ತದೆ. ಮನೆ, ಶಾಲೆ, ಗೆಳೆಯರ ನಡುವೆ, ಸಮಾಜದಲ್ಲಿ ಕಾಣುವ ಅನಪೇಕ್ಷಿತ ಎಂದುಕೊಳ್ಳುವ ಎಷ್ಟೋ ಸಂಗತಿಗಳಾಗಬಹುದು. ಎಲ್ಲವನ್ನೂ ಮಕ್ಕಳು ನೋಡುತ್ತಾರೆ. ಅನುಭವಿಸುತ್ತಾರೆ. ತಮ್ಮೊಳಗೇ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿಕೊಳ್ಳುತ್ತಾರೆ. ಇಂಥದ್ದಕ್ಕೆಲ್ಲಾ ಸ್ಪಂದಿಸುವ ಸಂವೇದನಾಶೀಲ ಬರವಣಿಗೆ ನಮ್ಮ ಈ ಮಕ್ಕಳ ಪತ್ರಿಕೆಗಳಲ್ಲಿ ಇಲ್ಲವೇ ಇಲ್ಲ ಎನ್ನುವಷ್ಟು ವಿರಳ. ಮಕ್ಕಳು ಎಂದರೆ ನಿರ್ದಿಷ್ಟವಾಗಿ 5 ರಿಂದ 8, 8ರಿಂದ 12, 12ರಿಂದ 16 ವರ್ಷದವರನ್ನು ಗಮನದಲ್ಲಿಟ್ಟುಕೊಂಡು ಪ್ರತ್ಯೇಕವಾಗಿಯೇ ಮಕ್ಕಳ ಪತ್ರಿಕೆಗಳು

**ಪುಟ 9 ಕ್ಕೆ ➤**



# ಶಿಕ್ಷಣದ ಗುರಿ ಹೀಗಿರಲಿ



**ವರಲಕ್ಷ್ಮಿ**
**ಕಛೇರಿ ಕಾರ್ಯದರ್ಶಿ**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**

ಭಾರತಕ್ಕೆ ಸ್ವಾತಂತ್ರ್ಯ ಬಂದು 60 ವರ್ಷಗಳು ಕಳೆದರೂ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಹೇಳಿಕೊಳ್ಳುವಷ್ಟರ ಮಟ್ಟಿಗೆ ಬದಲಾವಣೆ ಏನೂ ಆಗಿಲ್ಲ. ಏಕೆಂದರೆ ಸಮಾಜದಲ್ಲಿ ನಡೆಯುತ್ತಿರುವ ಅಹಿತಕರ ಘಟನೆಗಳನ್ನು ನೋಡಿದರೆ ನಾವು ಮಕ್ಕಳಿಗೆ ಕೊಡುವ ಶಿಕ್ಷಣದಲ್ಲಿ ಏನೋ ಕೊರತೆಯಿದೆ ಎಂದು ಅನಿಸುತ್ತಿದೆ. ಆ ಕೊರತೆ ಏನೆಂಬುದು ತಿಳಿದಿದ್ದರೂ ಬದಲಾಯಿಸಲು ಸಾಧ್ಯವಾಗದ ದುಃಸ್ಥಿತಿ ನಮಲ್ಲಿದೆ. ಒಬ್ಬ ಶಿಕ್ಷಕ ಲಕ್ಷಾಂತರ ವಿದ್ಯಾರ್ಥಿಗಳಿಗೆ ದಾರಿದೀಪವಾದಾನು. ಆದರೆ ಉತ್ತಮ ಶಿಕ್ಷಕನಾದರೂ ಉತ್ತಮ ವಿದ್ಯಾರ್ಥಿಗಳನ್ನಾಗಿ ರೂಪಿಸುವ ಸಾಮರ್ಥ್ಯ ಇದ್ದರೂ ಪಾಶ್ಚಾತ್ಯ ಶಿಕ್ಷಣ ಪದ್ಧತಿಯನ್ನು ಅನುಸರಿಸುತ್ತಿರುವ ನಮಗೆ ಇದು ಸಾಧ್ಯವಾಗುತ್ತಿಲ್ಲವೇನೊ?

ಪಾಶ್ಚಾತ್ಯ ಸಂಸ್ಕೃತಿ ಭೋಗ ಜೀವನಕ್ಕೆ ಆಸ್ಪದವೆನಿಸಿದೆ. ಬಹುತೇಕ ಮಂದಿ ಭಾರತೀಯರು ವಿಜ್ಞಾನ ಮತ್ತು ತಂತ್ರಜ್ಞಾನಗಳು ಪಾಶ್ಚಾತ್ಯರ ಕೊಡುಗೆ ಎಂದು ಭಾವಿಸಿ ಅದರಿಂದ ಮಾತ್ರ ಜೀವನ ಸಾರ್ಥಕವೆಂಬುದೇ ಅವರ ನಂಬಿಕೆ. ಇಂದೂ ಕೂಡ ಮೆಕಾಲೆ ಶಿಕ್ಷಣ ಪದ್ಧತಿಯ ಭೂತ ಕಾಡುತ್ತಿದೆ. ಅದು ಎಲ್ಲರಿಗೂ ಗೊತ್ತಿರುವ ಸಂಗತಿಯಾದರೂ ಏನೂ ಬದಲಾವಣೆ ತರದ ಸ್ಥಿತಿ ಏಕೆ ನಮ್ಮ ಭಾರತೀಯರಿಗೆ? ಇಂಗ್ಲೀಷ್ ಭಾಷೆಯಲ್ಲಿ ಮಾತನಾಡಿದರೆ ಸಾಕು ಅವನು ಬಹಳ ಜಾಣ, ಬುದ್ಧಿವಂತ, ಪ್ರಜ್ಞಾವಂತ ಎಂದೆಲ್ಲಾ ಹಣೆಪಟ್ಟಿ ಬಂದುಬಿಡುತ್ತದೆ. ಅದೇ ನಮ್ಮ ಮಾತೃ ಭಾಷೆಯಲ್ಲಿ ಮಾತನಾಡಿದರೆ ಈ ಹಣೆಪಟ್ಟಿ ಏಕಿಲ್ಲವೆಂಬುದೇ ತಿಳಿದಿಲ್ಲ. ಮೆಕಾಲೆ ಭಾರತ ಬಿಟ್ಟು ಹೋಗಿ ಸುಮಾರು 170 ವರ್ಷಗಳು ಕಳೆದರೂ ಅವನು ರೂಪಿಸಿದ ಪದ್ಧತಿಯನ್ನೇ ಅನುಸರಿಸಿಕೊಂಡು ಹೋಗುತ್ತಿರುವ ಭಾರತೀಯರಿಗೆ ಇಂದು ಶಿಕ್ಷಣವೆಂದರೆ ಹೆಚ್ಚು ಅಂಕಗಳನ್ನು ಗಳಿಸುವುದು, ಪ್ರಶಸ್ತಿಗಳನ್ನು ಪಡೆಯುವುದು, ಅದರ ಸಹಾಯದಿಂದ ಹೆಚ್ಚು ಸಂಬಳದ ವೃತ್ತಿ ಪಡೆಯುವುದು, ಭೋಗ ಜೀವನದೆಡೆ ಸಾಗುವುದೆ ಆಗಿದೆ.

ನಮ್ಮ ಪ್ರಾಚೀನರು ಮಕ್ಕಳಿಗೆ ವಿದ್ಯೆಯ ರೂಪದಲ್ಲಿ ಹೆಚ್ಚಿನ ಸಂಸ್ಕಾರ, ಸಂಪ್ರದಾಯ, ಗುರು-ಹಿರಿಯರಲ್ಲಿ ಗೌರವ, ದೇಶಪ್ರೇಮ. ಮಹಿಳೆಯರ ಬಗ್ಗೆ ಉತ್ತಮ ಭಾವನೆ ಇವೆಲ್ಲವನ್ನೂ ಮಕ್ಕಳಿಗೆ ಆಟೋಟದ ಮೂಲಕವೋ, ಕಥೆ ಪುರಾಣಗಳ ಮೂಲಕವೋ ಅರಿವು ಮೂಡಿಸುತ್ತಿದ್ದರು. ಇದನ್ನು ಶಿಕ್ಷಕ ಮತ್ತು ತಂದೆ ತಾಯಿ, ಅಜ್ಜಿ ತಾತ ಇವರು ಮಕ್ಕಳ ಮನಸ್ಸಿನಲ್ಲಿ ಎಂದೂ ಮರೆಯದಂತೆ ಮೂಡಿಸುತ್ತಿದ್ದರು. ಪುರಾಣ ಕಾವ್ಯಗಳಲ್ಲಿ ಶಿಷ್ಯನು ಗುರುವಿನ ಸೇವೆ ಮಾಡಿ ವಿದ್ಯೆಯನ್ನು ಗಳಿಸುತ್ತಿದ್ದ. ಆದರೆ ಈಗಿನದು ಬರೀ ಪುಸ್ತಕ ಜ್ಞಾನ ಮಾತ್ರ. ಹಿಂದೆ 64 ವಿದ್ಯೆಗಳನ್ನು ಗುರುಕುಲದಲ್ಲಿ ಕಲಿಸುವ ಪರಿಪಾಠವಿತ್ತು. ಹಾಗಾಗಿ ಪ್ರಸ್ತುತ ನಡೆಯುತ್ತಿರುವ ಅಹಿತಕರ ಘಟನೆಗಳೆಲ್ಲ ಪ್ರಾಚೀನ ಕಾಲದಲ್ಲಿ ನಡೆಯುತ್ತಿದುದು ಕಡಿಮೆ ಎಂಬುದು ನನ್ನ ಭಾವನೆ.

ಭಾರತದಲ್ಲಿ ಹಿಂದಿನ ಕಾಲದಿಂದಲೂ ಶಿಕ್ಷಣ ಖಾಸಗಿ ವ್ಯಕ್ತಿಗಳ ಹಾಗೂ ಸಂಸ್ಥೆಗಳ ವಶದಲ್ಲಿದ್ದಿತೆಂದು ಪುರಾಣಗಳಿಂದ ತಿಳಿಯುತ್ತದೆ. ಶಿಕ್ಷಣಕ್ಕೆ ರಾಜಾಶ್ರಯವಿದ್ದಿತು. ಪ್ರಾಚೀನ ಗುರುಕುಲಗಳು ರಾಜಾಶ್ರಯದಲ್ಲಿದ್ದರೂ ರಾಜರು ಶಿಕ್ಷಣವನ್ನು ರೂಪಿಸುವ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಆದರೆ ಈಗಂತೂ ಪಕ್ಷಗಳು ಬದಲಾದಂತೆ ಪಠ್ಯವೂ ಬದಲಾಗುತ್ತಿರುವುದು ಕಾಣುತ್ತಿದೆ.

ತಮ್ಮ ಮಕ್ಕಳಿಗೆ ಖಾಸಗೀ ಶಾಲೆಗಳಲ್ಲಿ ಶಿಕ್ಷಣ ಕೊಡಿಸಿದರೆ ಅದರಲ್ಲೂ ಹೆಚ್ಚು ಹಣ ಕೇಳುವ ಶಾಲೆಯಲ್ಲಿ ಶಿಕ್ಷಣ ಕೊಡಿಸಿದರೆ ಮಕ್ಕಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ. ಶಾಲೆಗೆ ಸೇರಿ ಕೆಲವೇ ದಿನಗಳಲ್ಲಿ ಮಕ್ಕಳು ಇಂಗ್ಲೀಷ್ ಮಾತನಾಡಿದರೆ ಪೋಷಕರಿಗೆ ಸ್ವರ್ಗಕ್ಕೆ ಮೂರೇ ಮೆಟ್ಟಿಲು, ನಾವು ಹಣ ಖರ್ಚು ಮಾಡಿದ್ದಕ್ಕೂ ಸಾರ್ಥಕವಾಯಿತು ಎಂಬುದು ಪೋಷಕರ ಭಾವನೆ. ನಮ್ಮ ಮಕ್ಕಳು ಏನು ಕಲಿತಿದ್ದಾರೆ, ನಮ್ಮ ಸಂಸ್ಕೃತಿಯ ಬಗ್ಗೆ ಹೇಗೆ ಅರಿತ್ತಿದ್ದಾರೆ, ಉತ್ತಮ ಸಂಸ್ಕಾರ ಬೆಳೆಸಿಕೊಳ್ಳುತ್ತಿದ್ದಾರಾ ಎಂದೆಲ್ಲ ಏಕೆ ಯೋಚಿಸುವುದಿಲ್ಲ. ಈಗಂತೂ ಕೆಲವು ಖಾಸಗೀ ಶಾಲೆಯಲ್ಲಿ ನಡೆಯುತ್ತಿರುವ ದೌರ್ಜನ್ಯವನ್ನು ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ನೋಡಿದರೂ ಪೋಷಕರ ಭಾವನೆ ಬದಲು ಮಾಡಲು ಆಗುತ್ತಿಲ್ಲ. ಒಬ್ಬೊಬ್ಬ ಪೋಷಕರೂ ತಮ್ಮ ಮಕ್ಕಳು ಸಂಸ್ಕಾರ, ಗುರು- ಹಿರಿಯರಲ್ಲಿ ಗೌರವ, ಆತ್ಮ ಸ್ಥೈರ್ಯ ದೇಶಪ್ರೇಮ ಎಷ್ಟರ ಮಟ್ಟಿಗೆ ಬೆಳೆಸಿಕೊಳುತ್ತಿದ್ದಾರೆ ಎಂದು ಕನ್ನಡಿಯಂತೆ ನೋಡುತ್ತಾ ಹೋದರೆ ಬಹುಶಃ ಮಕ್ಕಳಿಗೆ ಮುಂದಾಗುವ ಅನಾಹುತಗಳನ್ನು ತಡೆಯಬಹುದೇನೊ? ಇಂಗ್ಲೀಷ್ ಶಿಕ್ಷಣವೇ ಮಕ್ಕಳಿಗೆ ಭವಿಷ್ಯ ರೂಪಿಸಲು ಸಾಧ್ಯ ಎಂಬ ನಂಬಿಕೆ ಅವರಲ್ಲಿ. ಇರಲಿ ಭಾಷಾ ಮಾಧ್ಯಮದ ತಾರತಮ್ಯ ಇಂದು ನಿನ್ನೆಯದಲ್ಲ. ಪಾಶ್ಚಾತ್ಯರ ಗಾಳಿ ಬೀಸುತ್ತಲೇ ಇದೆ

**ಪುಟ 8 ಕ್ಕೆ ➢**

➢ ಪುಟ 7 ರಿಂದ.....

**ಶಿಕ್ಷಣದ ಗುರಿ**

ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ? ಇಂಗ್ಲೀಷ್ ಭಾಷೆ ಬೇಡವೇ ಬೇಡ ಎನ್ನುತ್ತಿಲ್ಲ, ಅದೂ ಬೇಕು. ಅದರ ಜೊತೆ ನಮ್ಮ ನಮ್ಮ ಮಾತೃಭಾಷಾಜ್ಞಾನವೂ ಇರಬೇಕು. ತಮ್ಮ ಗೌರವ ಹೆಚ್ಚಿಸಿಕೊಳ್ಳುವುದಕ್ಕೆ ಇಂಗ್ಲಿಷ್ ಭಾಷೆಯ ಜೊತೆಗೆ ನಮ್ಮ ಮಾತೃಭಾಷೆಯನ್ನು ಎತ್ತಿಹಿಡಿಯುವುದರಲ್ಲಿ ತಪ್ಪೇನು? ಅಂತರಾಳದಲ್ಲಿರುವ ವಿಷಯವನ್ನು ಅರ್ಥವಾಗುವ ರೀತಿಯಲ್ಲಿ ತಿಳಿಸಲು ಒಂದು ಭಾಷೆ ಬೇಕಷ್ಟೆ. ಅದು ಯಾವ ಭಾಷೆಯಾದರೇನು ಅಲ್ಲವೆ?. ಪ್ರಾಚೀನ ಸಂಸ್ಕೃತಿಯೊಂದಿಗೆ ಆಧುನಿಕ ವಿಷಯಗಳಲ್ಲಿ ಉತ್ತಮವಾದವು ಸಂಗಮವಾದಾಗ ಜೀವನ ಹಸನಾಗುತ್ತದೆ.

ಶಿಕ್ಷಣದ ಮೂಲಕ ಮೂಡಬೇಕಾದ ಮಹತ್ತರ ಮೌಲ್ಯಗಳು ಒಂದೊಂದಾಗಿ ಮಾಯವಾಗುತ್ತಿರುವ ಚಿಂತೆ ಬಹುಶಃ ಈಗೀಗ ಜನರಲ್ಲಿ ನಿಧಾನ ಗತಿಯಲ್ಲಿ ಅರ್ಥವಾಗುತ್ತಿದೆಯೇನೋ? 'ಮನಸ್ಸೆಂಬ ಕಡೆಗೋಲಿನಿಂದ ಹೃದಯವೆಂಬ ಹಾಲನ್ನು ಮಂಥನ ಮಾಡಿದಾಗ ಶುದ್ಧ ಅಂತಃಕರಣವೆಂಬ ಬೆಣ್ಣೆ ಹೊರಬರುತ್ತದೆ'. ಹಾಗೆ ಈ ಮಂಥನ ಕಾರ್ಯ ಶಿಕ್ಷಣದಿಂದಾಗಿ ಭಾರತೀಯ ಸಂಸ್ಕೃತಿ ಉಳಿಯಬೇಕು. ಪರಕೀಯ ಭಾಷಾಕಲಿಕೆಯೊಂದೆ ಶಿಕ್ಷಣವಾಗದೆ, ಮಕ್ಕಳಲ್ಲಿ ಉತ್ತಮ ಸಂಸ್ಕಾರ, ಸಂಬಂಧಗಳ ಮೌಲ್ಯ, ಗುರುಹಿರಿಯರಲ್ಲಿ ಪ್ರೀತಿ ಭಾವನೆ, ಸಂಪ್ರದಾಯ, ಸೃಜನಶೀಲತೆ ಆತ್ಮಸ್ಥೈರ್ಯ, ನಾನು ನನ್ನ ದೇಶವೆಂಬ ದೇಶಪ್ರೇಮ, ಈ ವಿಷಯಗಳನ್ನು ಮಕ್ಕಳು ಕಲಿಯುತ್ತಿದ್ದಾರಾ ಎಂದು ಶಿಕ್ಷಕರು, ಪೋಷಕರೂ ಗಮನಿಸಿದರೆ ಸಾಕು. ತಮ್ಮ ಮಕ್ಕಳ ಭವಿಷ್ಯ ಉತ್ತಮ ವಾಗುವುದೆಂದು ನಿರ್ಧರಿಸಬಹುದು. 'ಧರ್ಮೋ ರಕ್ಷತಿ ರಕ್ಷಿತಃ'. ನಮ್ಮ ಸಮಾಜ ನಮ್ಮ ಧರ್ಮವನ್ನೇ ಮರೆತಾಗ ಅದಾದರೂ ಅವರನ್ನು ಹೇಗೆ ರಕ್ಷಿಸುತ್ತದೆ? ಸಮಾಜದಲ್ಲಿ ನಡೆಯುತ್ತಿರುವ ಕೊಲೆ, ಅತ್ಯಾಚಾರ, ಆತ್ಮಹತ್ಯೆ, ರಾಕ್ಷಸ ಪ್ರವೃತ್ತಿ, ಬಾಲಾಪರಾಧ, ಭ್ರಷ್ಟಾಚಾರ ಇಂತಹ ಸೋಂಕು ರೋಗಗಳಿಗೆ ನಮ್ಮನಮ್ಮಲ್ಲಿರುವ ಔಷಧಿಯನ್ನೇ ಉಣಬಡಿಸಿ ಈ ಕಾಯಿಲೆಗಳಿಂದ ಮುಕ್ತರಾಗಿ ಸೋಣ. ಉತ್ತಮ ಸಮಾಜ ರೂಪಿಸೋಣ. ಒಗ್ಗಟ್ಟಿನಿಂದ ಬದುಕೋಣ. ಭೂಮಾತೆಯ ಹೆಸರನ್ನು ಉನ್ನತ ಶಿಖರಕ್ಕೇರಿಸೋಣ. ●

➢ ಪುಟ 4 ರಿಂದ.....

**ಬರಹಗಾರರ ಕಮ್ಮಟ**

ಜೊತೆಗೆ ಕಸರತ್ತು, ನಿಖರತೆ, ಸತ್ಯಾಂಶ ಪರೀಕ್ಷೆ, ಕುತೂಹಲ, ವಸ್ತುನಿಷ್ಠತೆ, ನೈಜತೆಗಳಿಂದ ಕೂಡಿರಬೇಕು ಎಂಬುದಾಗಿ ತಿಳಿಸಿದರು. ಸಂಗ್ರಹಿಸುವ ಶಕ್ತಿ, ಸ್ನೇಹಭಾವನೆ, ಮಾತಿನಕಲೆ, ವಿನಯಶೀಲತೆ, ಸಮಯನಿಷ್ಠೆ, ಧೈರ್ಯ, ದಾಖಲೆಗಳು ಅವಶ್ಯಕವಾದವು ಎಂಬುದನ್ನು ವಿವರಿಸಿದರು. ವಾಕ್ಯರಚನೆ ಮತ್ತು ಕೆಲವು ವಿಶೇಷ ಜೊತೆಗೆ ಅವುಗಳ ಅರ್ಥ ಮತ್ತು ವರದಿಯಲ್ಲಿನ ಸಾಮಾನ್ಯ ದೋಷಗಳು ಮತ್ತು ಸರಿಪಡಿಸುವಿಕೆಯ ಬಗ್ಗೆ ಮಾಹಿತಿ ನೀಡಿದರು. ಹೀಗೆ ಮೂರು ಹಂತಗಳಲ್ಲೂ ತರಬೇತಿ ಪಡೆದ ಶಿಕ್ಷಕಿಯರಿಗೆ ಕೊನೆಯ ಹಂತದಲ್ಲಿ ಕಿರು ವರದಿ ಪರೀಕ್ಷೆ ನಡೆಸಲಾಯಿತು. ಎಲ್ಲರೂ ಅವರವರಿಗೆ ತೋಚಿದ ವಿಷಯಗಳ ಕುರಿತು ವರದಿ ರಚನೆಯಲ್ಲಿ ತಲ್ಲೀನರಾದರು. ನಂತರದಲ್ಲಿ ಅವುಗಳ ಮೌಲ್ಯಮಾಪನ, ತಪ್ಪುಗಳ ತಿದ್ದುಪಡಿಯನ್ನು ಮಾಡಲಾಯಿತು. ಲಕ್ಷ್ಮಣ್‌ರವರು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಕಟ್ಟಕಡೆಯ ಹಂತದಲ್ಲಿ ಬಂದು ತಲುಪಿದ ಎಲ್ಲರಿಗೂ ಸಮಯಕಳೆದುಹೋದುದರ ಅನುಭವ ಅರಿವಿಗೇ ಬಂದಿರಲಿಲ್ಲ. ಕೊನೆಯದಾಗಿ ವಂದನಾರ್ಪಣೆ ಮಾಡ ಲಾಯಿತು. ಕೆಲವು ಶಿಕ್ಷಕಿಯರು ಸ್ವ-ಇಚ್ಛೆಯಿಂದ ಕಾರ್ಯಕ್ರಮದ ಕುರಿತಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಜೊತೆಗೆ ಮತ್ತಷ್ಟು ಅವಶ್ಯಕ ಕಾರ್ಯಕ್ರಮಗಳಿಗೆ ಒತ್ತು ಕೊಡಬೇಕಾಗಿ ಮನವಿ ಮಾಡಿದರು.

ಸಮಾಜದಲ್ಲಿ ಗುರುವಿನ ಸ್ಥಾನ ಶ್ರೇಷ್ಠವಾದದ್ದು, ಅವರ ನಿಸ್ವಾರ್ಥ ಭಾವನೆ ನಿಜಕ್ಕೂ ಶ್ಲಾಘನೀಯ. ಅಂತಹ ಶಿಕ್ಷಕಿಯರು ಲೇಖನಿ ಹಿಡಿದು ತಮ್ಮ ತಿಳುವಳಿಕೆಯನ್ನು, ಬರಹಗಳ ಮೂಲಕ ಚಿಮ್ಮಿಸಬೇಕು, ಸಮಾಜಕ್ಕೆ ಕೊಡುಗೆಗಳಾಗಿ ನಿಲ್ಲಬೇಕೆಂಬುದು ಕಾರ್ಯಕ್ರಮದ ಅಂತಿಮ ಉದ್ದೇಶವಾಗಿತ್ತು. ಸದಾ ಸೀಮೆಸುಣ್ಣ ಹಿಡಿದು ಸುಣ್ಣವಾದ ಕೈಗಳಿಗೆ, ಲೇಖನಿಯ ಮಸಿ ಅಂಟ ಬೇಕೆಂಬುದು ಕಾರ್ಯಕ್ರಮದ ಆಶಯವಾಗಿತ್ತು. ಕಾರ್ಯಕ್ರಮ ದಲ್ಲಿ ನೆರೆದಿದ್ದ ಎಲ್ಲಾ ಶಿಕ್ಷಕಿಯರು ಲೇಖಕಿಯರಾಗುವ ಅಪೇಕ್ಷೆಯನ್ನು ಹೊತ್ತು, ಕಾರ್ಯಕ್ರಮಕ್ಕೆ ವಿದಾಯ ಹೇಳಿದರು. ●

**ಸಾಧನೆಗೆ ನಮನ**

**ಭಾರತದ ವೈಜ್ಞಾನಿಕ ಪ್ರಪಂಚದಲ್ಲಿ ನವೆಂಬರ್ 5 –2013 ಮತ್ತು ಸೆಪ್ಟೆಂಬರ್ 24–2014 ಈ ಎರಡೂ ದಿನಗಳು ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ದಿನ. ನವೆಂಬರ್ 5, ಭಾರತದ ಮಾರ್ಸ್ ಆರ್ಬಿಟರ್ ಮಿಷನ್ (MOM) ನನ್ನು ಯಶಸ್ವಿಯಾಗಿ ಉಡಾಯಿಸಿದ ದಿನವಾದರೆ, ಸೆಪ್ಟೆಂಬರ್ 24 ಅದನ್ನು ಮಂಗಳನ ಕಕ್ಷೆಗೆ ಜೋಡಿಸಿದ ದಿನ. ವಿಶ್ವದಲ್ಲೇ ಪ್ರಪ್ರಥಮ ಪ್ರಯತ್ನದಲ್ಲೇ ಯಶಸ್ಸು ಸಾಧಿಸಿದ ರಾಷ್ಟ್ರ ಭಾರತ. ವಿಶ್ವದ ಅತಿ ಮುಂದುವರಿದ ದೇಶಗಳು ಆಶ್ಚರ್ಯದಿಂದ ಭಾರತದ ಸಾಧನೆಯನ್ನು ಸ್ವೀಕರಿಸುವಂತಾಯಿತು. ಈ ಸಾಧನೆ ಅಮೆರಿಕಾದ Maven ಕೆಂಪು ಗ್ರಹವನ್ನು ಸೇರಿದ ಎರಡು ದಿನದಲ್ಲೇ, ಕಕ್ಷೆಗೆ ಸೇರಿಸಿದ ನಮ್ಮೀ ಸಾಧನೆ ಮುಂದುವರಿದ ದೇಶಗಳಿಗೆ ಹಲವು ಪಾಠಗಳನ್ನು ಹೇಳುವಂತಿದೆ. ಕೆಲವು ದಶಕಗಳ ಹಿಂದೆ ಭಾರತಕ್ಕೆ ಅಮೇರಿಕ ಕ್ರಯೋಜೆನಿಕ್ ತಂತ್ರಜ್ಞಾನವನ್ನು ನಿರಾಕರಿಸಿದ್ದಲ್ಲದೆ ರಷ್ಯಾದ ಮೇಲೆ ಒತ್ತಡ ಹೇರಿ ಆ ದೇಶವು ಕ್ರಯೋಜೆನಿಕ್ ತಂತ್ರಜ್ಞಾನವನ್ನು ನಿರಾಕರಿಸುವಂತೆ ಮಾಡಿ, ಭಾರತದ ಬಾಹ್ಯಾಕಾಶ ಸಂಶೋಧನೆ ಹಿಂಸರಿಯುವಂತೆ ಮಾಡಿದ್ದು ಎಲ್ಲರಿಗೂ ತಿಳಿದ ವಿಷಯ. ಇಂತಹ ಪರಿಸ್ಥಿತಿಯಲ್ಲಿಯೂ ಸಹ ಭಾರತದ ಈ ಸಾಧನೆ ಅತ್ಯಂತ ಮಹತ್ವಪೂರ್ಣ.**

**ಹೆಚ್ಚೇಕೆ, ವಿಶ್ವದಲ್ಲೇ ಅತಿ ಮುಂದುವರಿದ ದೇಶ ಅಮೇರಿಕ ಮಂಗಳ ಗ್ರಹ ಅನ್ವೇಷಣೆಗೆ 671 ದಶಲಕ್ಷ ಡಾಲರ್ ಹಣ ಖರ್ಚು ಮಾಡಿದ್ದರೆ ಭಾರತದ ಮಹತ್ಸಾಧನೆಗೆ ತಗುಲಿದ ವೆಚ್ಚ ಕೇವಲ 74 ದಶಲಕ್ಷ ಡಾಲರ್‌ಗಳು ಮಾತ್ರ. ಕಡಿಮೆ ಖರ್ಚಿನಲ್ಲಿ ಮುಂದುವರಿದ ರಾಷ್ಟ್ರಗಳ ಜೊತೆ ಸ್ಪರ್ಧಿಸಿ ಜಯಸಾಧಿಸಿದ ಇಸ್ರೋದ ವಿಜ್ಞಾನ ಹಾಗೂ ತಂತ್ರಜ್ಞಾನಿಗಳನ್ನು ಮತ್ತು ಇವರ ಜೊತೆ ಯಶಸ್ಸು ಸಾಧಿಸಲು ಟೊಂಕಕಟ್ಟಿ ನಿಂತ ಎಲ್ಲರನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಅಭಿನಂದಿಸುತ್ತದೆ.**

**ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಜಗಳವೇ ಲೇಸು – ಕನಕದಾಸ**

# ಶಿಕ್ಷಣದಲ್ಲಿ ಜೀವನ ಮೌಲ್ಯಗಳು: ಕಾರ್ಯಾಗಾರ

ಇಂದಿಗೂ ಶಿಕ್ಷಕನ ಬೆಲೆ ಎಲ್ಲೂ ಕಡಿಮೆಯಾಗಿಲ್ಲ. ಅದನ್ನು ನಾವು ಹೇಗೆ ಗಳಿಸಿಕೊಳ್ಳಬಹುದು? ಯಾವ ಮಗುವೂ ದಡ್ಡನಲ್ಲ. ಶಿಕ್ಷಕನಲ್ಲಿ ಸದಾ ಬತ್ತದ ಉತ್ಸಾಹವಿದ್ದಲ್ಲಿ ಮಗುವನ್ನು ಹೇಗೆ ಪುಟಿದೇಳಿಸಬಹುದು ಎಂಬ ವಿಚಾರವನ್ನು ತಮ್ಮ ಅನುಭವಗಳ ಮೂಲಕ ಶ್ರೀಯುತ ಸುರೇಶ್ ಕುಲಕರ್ಣಿಯವರು ತಿಳಿಸಿದಾಗ ಇಡೀ ಶಿಕ್ಷಕ ವೃಂದ ತಲೆದೂಗಿತು.

ದಿನಾಂಕ 18.9.2014 ರಂದು ಶಿಕ್ಷಣದಲ್ಲಿ ಜೀವನ ಮೌಲ್ಯಗಳು ಹಾಗೂ ಶಿಕ್ಷಕ ಗುರುವಾಗುವುದು ಹೇಗೆ ಎಂಬ ವಿಷಯದ ಕಾರ್ಯಾಗಾರದಲ್ಲಿ ಶ್ರೀಯುತ ಸುರೇಶ್ ಕುಲಕರ್ಣಿಯವರು ಭಾಗವಹಿಸಿ ಮಾತನಾಡುತ್ತಿದ್ದರು. ಒಂದು ದಿನದ ಈ ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕ ಮತ್ತು ಶ್ರೀವಿವೇಕಾನಂದ ಸದ್ಭಾವನಾ ಬಳಗವು ಹಮ್ಮಿಕೊಂಡಿತ್ತು. ಚಿತ್ರಕಲಾ ಶಿಕ್ಷಕರಾದ ಶ್ರೀಯುತ ಸುರೇಶ್‌ರವರು ಸರಳ ಹಾಗೂ ಹಾಸ್ಯ ಶೈಲಿಯಲ್ಲಿ ತರಗತಿ ನಿರ್ವಹಿಸುವ ಬಗ್ಗೆ ತಿಳಿಸಿದಾಗ ಎಲ್ಲರಿಗೂ ರೋಮಾಂಚನವಾಯಿತು.

ಮಧ್ಯಾಹ್ನದ ಅವಧಿಯಲ್ಲಿ ವಿಧಾನ ಮಂಡಲದ ವಿರೋಧಪಕ್ಷದ ಸಚೇತಕ ಹಾಗೂ ಶಿಕ್ಷಕರ ಪ್ರತಿನಿಧಿಗಳಾದ ಕ್ಯಾ. ಗಣೇಶ್ ಕಾರ್ಣಿಕ್ ರವರು ಉಪಸ್ಥಿತರಿದ್ದು ಶಿಕ್ಷಕರ ಕಾರ್ಯವಿಧಾನಗಳ ಬಗ್ಗೆ ಮಾತನಾಡಿದರು. ಅವರು ಸೈನಿಕ ಜೀವನದ ಹಲವಾರು ಘಟನೆಗಳನ್ನು ನಿರೂಪಿಸಿದುದು ಎಲ್ಲರ ಕಣ್ಣಂಚು ಒದ್ದೆಯಾಗುವಂತೆ ಮಾಡಿತು.

ಅನಂತರ ಖ್ಯಾತ ಬರಹಗಾರರೂ, ಅಂಕಣಕಾರರೂ, ಪ್ರಖರ ವಾಗ್ಮಿಗಳು, ಜಾಗೋಭಾರತ್ ಖ್ಯಾತಿಯ ಶ್ರೀಯುತ ಚಕ್ರವರ್ತಿ ಸೂಲಿಬೆಲೆಯವರು ಶಿಕ್ಷಕನೆಂದರೆ ಯಾರು? ಗುರುವೆಂದರೆ ಯಾರು? ಶಿಕ್ಷಕ ಗುರುವಾಗಬೇಕಾದರೆ ಯಾವ ಗುಣಲಕ್ಷಣಗಳನ್ನು ಮೈಗೂಡಿಸಿಕೊಳ್ಳಬೇಕೆಂದು ತಮ್ಮ ಕಂಚಿನ ಕಂಠದಲ್ಲಿ ಹೇಳುತ್ತಿರುವಾಗ ಮಧ್ಯಾಹ್ನ 3.30ಕ್ಕೆ ಮುಗಿಯಬೇಕಾದ ಕಾರ್ಯಕ್ರಮ ಸಂಜೆ 5.30 ದಾಟಿದ್ದರೂ ಮುಂದುವರೆದಿದ್ದು ಯಾರ ಗಮನಕ್ಕೂ ಬಂದಿರಲಿಲ್ಲ. ಎಲ್ಲರಲ್ಲೂ ಸಾರ್ಥಕ ಭಾವನೆ ಮೂಡಿತ್ತು.

ಬೆಳಗಿನ ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ವಿವೇಕಾನಂದ ಸಾಧನಾ ಕೇಂದ್ರದಲ್ಲಿ ಅಧ್ಯಕ್ಷರಾದ ಶ್ರೀಮತ್ ಚಂದ್ರೇಶಾನಂದಜೀಯವರು, ಶ್ರೀಯುತ ಸುರೇಶ್ ಕುಲಕರ್ಣಿಯವರು, ಶ್ರೀ ಚಕ್ರವರ್ತಿ ಸೂಲಿಬೆಲೆಯವರು, ಶ್ರೀವಿವೇಕಾನಂದ ಸದ್ಭಾವನಾ ಬಳಗದ ಅಧ್ಯಕ್ಷರಾದ ಶ್ರೀಯುತ ಶ್ರೀನಿವಾಸ ಮೂರ್ತಿ, ಸಿಲಿಕಾನ್ ಸಿಟಿ ಕಾಲೇಜಿನ ಅಧ್ಯಕ್ಷರಾದ ಡಾ॥ ಹೆಚ್.ಎಂ ಚಂದ್ರಶೇಖರ್ ಹಾಗೂ ಶಿಕ್ಷಕ ಸಂಘದ ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಶ್ರೀಯುತ ಬಿ.ಎ. ಸುರೇಂದ್ರ ಇವರುಗಳು ಉಪಸ್ಥಿತರಿದ್ದರು. ಶ್ರೀಮತಿ ಜಿ.ಎನ್ ವಾಸುಕಿ, ದಕ್ಷಿಣ ಜಿಲ್ಲಾ ಖಜಾಂಚಿ ಎಲ್ಲರನ್ನೂ ಸ್ವಾಗತಿಸಿ ಪರಿಚಯಿಸಿದರು. ಶ್ರೀವಿವೇಕಾನಂದ ಸದ್ಭಾವನಾ ಬಳಗದ ಕಾರ್ಯದರ್ಶಿ ಶ್ರೀ ರುದ್ರೇಶ್ ಕಾರ್ಯಕ್ರಮದ ನಿರೂಪಣೆ ಮಾಡಿದರು.

**ವರದಿ: ಶ್ರೀಮತಿ ಜಿ.ಎನ್. ವಾಸುಕಿ**

➢ ಪುಟ 6 ರಿಂದ.....

**ಮಕ್ಕಳ ದಿನಾಚರಣೆ**

ರೂಪುಗೊಂಡರೆ ಅದರ ಉದ್ದೇಶ ಸಫಲವಾಗುತ್ತದೆ. ರಂಜನೆಯ ಹಾಗೆಯೇ ಮಕ್ಕಳಿಗೆ ಬೌದ್ಧಿಕ ಕಸರತ್ತು ಮುಟ್ಟಿಸುವ ಆಟದ ಹೊಸ ಬಗೆಗಳ ಪ್ರಯತ್ನವೂ ಇತ್ತೀಚೆಗೆ ಆಗಿಲ್ಲ. ಅವರ ಬೇರೆ ಬೇರೆ ತಲ್ಲಣ, ಕಳವಳ, ಸಮಸ್ಯೆಗಳ ಕುರಿತು ವಿಶ್ಲೇಷಿಸುವ ಪ್ರಯತ್ನಗಳೂ ಆಗಿಲ್ಲ. ಪತ್ರಿಕೆಯನ್ನು ಆಸಕ್ತಿಯುತ ವಾಗಿ, ಆಕರ್ಷಕವಾಗಿ ರೂಪಿಸುವುದಷ್ಟೇ ಅಲ್ಲ ಅದನ್ನು ಮಕ್ಕಳಿಗೆ ಯಶಸ್ವಿಯಾಗಿ ಮುಟ್ಟಿಸುವ ಪ್ರಯತ್ನವೂ ಆಗಬೇಕು. ಜಾಹಿರಾತಿನ ಹೊಸ ಹೊಸ ಸಾಧ್ಯತೆಗಳನ್ನು ಬಳಸಿಕೊಂಡರೂ ತಪ್ಪಿಲ್ಲ. ಪತ್ರಿಕೆ ಮಕ್ಕಳಿಗೆ ತಲುಪಿ ಅವರದನ್ನು ಆಸ್ವಾದಿಸುವಂತಾಗಬೇಕು. ಅವರ ಕಲ್ಪನಾಶಕ್ತಿ, ವಿವೇಕ, ಜ್ಞಾನ, ಅನುಭವ ಇದರಿಂದ ವಿಸ್ತರಿಸಲು ಮತ್ತು ಅವರು ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡು ಮಾನಸಿಕವಾಗಿ ಸಬಲರಾಗಲು ಅನುಕೂಲ ಆಗಬೇಕು.

ಮಕ್ಕಳಿಗೆ ಮಾಹಿತಿಯಾಧಾರಿತವಾಗಿ ಇತಿಹಾಸ, ವಿಜ್ಞಾನ, ಪ್ರಾದೇಶಿಕ ವಿಶೇಷತೆ, ಪ್ರಾಣಿ–ಪಕ್ಷಿ ವೈಶಿಷ್ಟ್ಯ, ರೋಚಕ ಸಂಗತಿಗಳು ಹೀಗೆ ನಾನಾ ಬಗೆಯಲ್ಲಿ ಮಾಹಿತಿಯನ್ನೂ ರಂಜನೀಯವಾಗಿ ಕೊಡುವ ಪ್ರಯತ್ನಗಳು ಮತ್ತಷ್ಟು ಹೆಚ್ಚಾಗಬೇಕಿದೆ. ಯಾವ ಮಕ್ಕಳ ಪತ್ರಿಕೆಯೂ ನಮ್ಮ ಸುದ್ದಿ ಮಾಧ್ಯಮಗಳು ದೊಡ್ಡವರಿಗಾಗಿ ನೀಡುವಂತದ್ದನ್ನು ಸೂಕ್ಷ್ಮವಾಗಿ ಯಾದರೂ ಮಕ್ಕಳಿಗೆ ನೀಡಲು ಪ್ರಯತ್ನಿಸಿಲ್ಲ. ಇವು ನಿಯತಕಾಲಿಕಗಳು ಎಂಬ ಒಂದು ಮಿತಿಯಿದ್ದರೂ ಪ್ರಚಲಿತ ಸುದ್ದಿಯನ್ನು ಮಕ್ಕಳ ಮಟ್ಟಕ್ಕೆ ಇಳಿದು ಅಗತ್ಯವಾದುದನ್ನು ನೀಡುವ ಪ್ರಯತ್ನ ಮಾಡಬಹುದು. ಹಾಗೇ ಇವತ್ತಿನ ಮಕ್ಕಳ ಜ್ವಲಂತ ಸಮಸ್ಯೆಗಳನ್ನು ಮುಖ್ಯವಾಹಿನಿಯಲ್ಲಿ ಚರ್ಚಿಸುವಂತಹ ಕೆಲಸಗಳೂ ಆಗುತ್ತಿಲ್ಲ ಎಂಬುದೂ ಒಂದು ಪ್ರಮುಖ ಆರೋಪವೇ.

ಮಕ್ಕಳೇ ಬರೆದ ಕಥೆ, ಕವಿತೆ, ಚಿತ್ರಕ್ಕೆ ಪತ್ರಿಕೆಗಳಲ್ಲಿ ಜಾಗವಿರುತ್ತದೆ. ಆದರೆ ವಿಶಿಷ್ಟ ಸಾಧನೆ ಮಾಡಿದ ಮಕ್ಕಳ ವ್ಯಕ್ತಿಚಿತ್ರ, ಮಕ್ಕಳ ಪರ ಸಂಘ ಸಂಸ್ಥೆಗಳ ಪರಿಚಯ, ಅಂಗವಿಕಲ ಶಾಲಾಸಂಸ್ಥೆಯ ಪರಿಚಯ, ಅಂತಹ ಮಕ್ಕಳ ವಿಶೇಷ ಸಂದರ್ಶನಗಳು ಕಾಣ ಸಿಗುವುದಿಲ್ಲ. ಇಂದಿನ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗೆ ತಜ್ಞರಿಂದ ಉತ್ತರ, ಮಕ್ಕಳ ಸ್ವಾರಸ್ಯದ ಅನುಭವಗಳಿಗೆ ಜಾಗ, ಒಂದು ವಿಷಯ ನೀಡಿ ಮಕ್ಕಳ ಅಭಿಪ್ರಾಯ ಆಹ್ವಾನಿಸುವುದು ಇಂಥವನ್ನು ಮಾಡಿದಾಗ ಮಕ್ಕಳಿಗೆ ತಾವೇ ತಮ್ಮದೊಂದು ಅನನ್ಯತೆಯನ್ನು, ಅಭಿಪ್ರಾಯವನ್ನು ರೂಪಿಸಿಕೊಳ್ಳಲು ತನ್ಮೂಲಕ ಪ್ರತ್ಯೇಕ ವ್ಯಕ್ತಿತ್ವಹೊಂದಲು ಸಾಧ್ಯವಾಗುತ್ತದೆ.

●


# ವಿದ್ಯಾರ್ಥಿ ಮಿತ್ರ – 12





## 1. ರಸಪ್ರಶ್ನೆ


1. ನ್ಯಾಷನಲ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿ ಎಲ್ಲಿದೆ ?
2. ಅಯೋಧ್ಯೆ ಯಾವ ನದಿಯ ದಡದ ಮೇಲಿದೆ ?
3. ಹಿಂದೂ ಕಾನೂನಿನ ಮಿತಾಕ್ಷರ ಎಂಬ ಪುಸ್ತಕವನ್ನು ಬರೆದವರು ಯಾರು ?
4. ಅಂತ್ಯೋದಯ ಅನ್ನ ಯೋಜನೆ ಜಾರಿಗೊಳಿಸಲಾದ ವರ್ಷ ಯಾವುದು ?
5. ಗೌರ್ಮೆಂಟ್ ಬ್ರಾಹ್ಮಣ ಇದು ಯಾವ ವ್ಯಕ್ತಿಯ ಕುರಿತ ಆತ್ಮ ಕಥನವಾಗಿದೆ ?
6. ಶಂಭುಲಿಂಗ ಇದು ಯಾರ ಅಂಕಿತನಾಮವಾಗಿದೆ ?
7. ಏಕಕಾಲಕ್ಕೆ ದೃಷ್ಟಿಯನ್ನು ಎರಡು ಕಡೆ ಕೇಂದ್ರೀಕರಿಸುವ ಪ್ರಾಣಿ ಯಾವುದು ?
8. ಜಪಾನ್ ರಾಷ್ಟ್ರದ ನಾಣ್ಯದ ಹೆಸರೇನು ?
9. ಭಾರತೀಯ ತರಕಾರಿ ಸಂಶೋಧನಾ ಸಂಸ್ಥೆ ಎಲ್ಲಿದೆ ?
10. ವಂಶಿ ಇದು ಯಾರ ಕಾವ್ಯ ನಾಮ ?
11. ಸರ್ಕಾರವು ಹೂಡಿಕೆ ಹಿಂತೆಗೆತ ಆಯೋಗವನ್ನು ರಚಿಸಿದ ವರ್ಷ ಯಾವುದು ?
12. ದಾರೋಜಿ ಕರಡಿಧಾಮ ಕರ್ನಾಟಕದ ಯಾವ ಜಿಲ್ಲೆಯಲ್ಲಿದೆ ?
13. ಜಲದುರ್ಗ ಜಲಪಾತ ಕರ್ನಾಟಕದ ಯಾವ ಜಿಲ್ಲೆಯಲ್ಲಿದೆ ?
14. ಸ್ವತಂತ್ರ ಭಾರತದ ಮೊದಲ ಕೈಗಾರಿಕಾ ನೀತಿ ಘೋಷಿಸಲ್ಪಟ್ಟ ವರ್ಷ ಯಾವುದು ?
15. 2009 ರಲ್ಲಿ ಚಿತ್ರದುರ್ಗದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಯಾರು ?
16. ತ್ರಿಪುರಾ ರಾಜ್ಯದ ರಾಜಧಾನಿ ಯಾವುದು ?
17. ನೇತಾಜಿ ಸುಭಾಷ್‌ಚಂದ್ರಬೋಸ್ ಕ್ರೀಡಾ ಅಕಾಡೆಮಿ ಮಹಾರಾಷ್ಟ್ರದಲ್ಲಿ ಎಲ್ಲಿದೆ ?
18. ಕೇವಲಾದೇವ್ ರಾಷ್ಟ್ರೀಯ ಉದ್ಯಾನವನ ಯಾವ ರಾಜ್ಯದಲ್ಲಿದೆ ?
19. ಕಾರ್ಗಿಲ್ ಕದನ ನಡೆದ ವರ್ಷ ಯಾವುದು ?
20. ವಿಶ್ವದಲ್ಲಿ ಅತ್ಯಂತ ದೊಡ್ಡ ವಸ್ತು ಸಂಗ್ರಹಾಲಯ ಯಾವುದು ?

## 2. ಇವುಗಳು ಇರುವ ಊರುಗಳನ್ನು ಹೇಳಬಲ್ಲಿರಾ ?


1


2


3


4

## ವಿದ್ಯಾರ್ಥಿ ಮಿತ್ರ – 11 ರ ಉತ್ತರ

**1. ರಸಪ್ರಶ್ನೆ** : ಅ) ನಾಗಾಲ್ಯಾಂಡ್ ; ಆ) ಮೇಘಾಲಯ ; ಇ) ತ್ರಿಪುರ ; ಈ) ಮಿಝೋರಾಂ ; ಉ) ಓಡಿಶಾ

**2. ದೇವಾಲಯಗಳು :** 1) ಅಮೃತಸರದ ಸ್ವರ್ಣಮಂದಿರ ; 2) ಪುರಿಯ ಜಗನ್ನಾಥ ದೇವಾಲಯ ; 3) ಮಧುರೆ ಮೀನಾಕ್ಷಿ ದೇವಾಲಯ ; 4) ಜೈಪುರದ ಹವಾಮಹಲ್

**3. ವಿಶ್ವವಿದ್ಯಾನಿಲಯಗಳು :** 1. ನಾಸಿಕ್, ಅಹ್ಮದಾಬಾದ್ ; 2. ಕೊಲ್ಕತ್ತಾ ; 3. ವಾರಣಾಸಿ (ಬನಾರಸ್, ಕಾಶಿ); 4. ದೆಹಲಿ ; 5. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**4. ಮಹಾಪುರುಷರು :** ಅ) ವಿನಾಯಕ ದಾಮೋದರ ಸಾವರ್ಕರ್ ; ಆ) ರವೀಂದ್ರನಾಥ ಠಾಗೋರ್ ; ಇ) ಸಿ. ರಾಜಗೋಪಾಲಾಚಾರಿ ; ಈ) ಲಾಲಾ ಲಜಪತ್ ರಾಯ್ ; ಉ) ವಿನೋಬಾ ಭಾವೆ

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

# ಕನ್ನಡ ರಾಜ್ಯೋತ್ಸವ



ಇದೀಗ ಮತ್ತೊಂದು ಕನ್ನಡ ರಾಜ್ಯೋತ್ಸವದ ದಿನ ಸಮೀಪಿಸಿದೆ. ಸಂತಸದ, ಸಂಭ್ರಮದ ಜೊತೆಗೇ ಇದು ಕೇವಲ ಆಚರಣೆಯ ಬಾಹ್ಯ ವಿಧಿಗಳಿಗಷ್ಟೇ ಸೀಮಿತಗೊಳ್ಳದೆ ಸಂಪೂರ್ಣವಾಗಿ ಕ್ರಿಯಾತ್ಮಕವಾಗಿದೆಯೇ ಎಂಬುದರ ಚಿಂತನೆ ಕೂಡ ಅಗತ್ಯವಾಗಿದೆ. ಏಕೆಂದರೆ, 1956 ರಲ್ಲಿ ಸುಭದ್ರ ಕನ್ನಡನಾಡಿನ ಸ್ಥಾಪನೆಯಾಯಿತೆಂದು ಭಾವಿಸಲಾಗಿದೆಯಾದರೂ ಪ್ರಸ್ತುತ ಪರಿಸ್ಥಿತಿಯನ್ನು ಗಮನಿಸಿದಾಗ ಕನ್ನಡ ನಾಡು, ನುಡಿ, ಸಂಸ್ಕೃತಿ ದಿನೇ ದಿನೇ ಎಷ್ಟರಮಟ್ಟಿಗೆ ಜಾಳಾಗುತ್ತಿದೆ, ಅದನ್ನು ಆರೋಗ್ಯಕರವಾಗಿ ಉಳಿಸಿಕೊಳ್ಳಲು ನಾವೆಷ್ಟು ಕಾಳಜಿ ವಹಿಸುತ್ತಿದ್ದೇವೆಂಬ ಸತ್ಯ ನಮ್ಮ ಅರಿವಿಗೇ ಗೋಚರವಾಗುತ್ತದೆ.

'ಹಿಂದಣ ಹೆಜ್ಜೆಯನರಿತಲ್ಲದೆ ಮುಂದಿನ ಹೆಜ್ಜೆಯನಿಡಲಾಗದು' ಎಂಬ ಕವಿವಾಣಿಯಂತೆ ಕರ್ನಾಟಕ ಏಕೀಕರಣದ ಮಹತ್ವವನ್ನು, ಅದಕ್ಕಾಗಿ ನಡೆದ ಹೋರಾಟ, ಬಲಿದಾನ ಮಾಡಿದ ಅದೆಷ್ಟೋ ಕನ್ನಡಿಗರ ನಿಷ್ಠೆ, ಪ್ರಾಮಾಣಿಕತೆ, ತಾಯ್ನುಡಿಯ, ತಾಯ್ನಾಡಿನ ಪ್ರೀತಿ, ಕಳಕಳಿ ಎಲ್ಲದರ ಕುರಿತು ಕನಿಷ್ಠಮಟ್ಟದ ಅರಿವಾದರೂ ಇದ್ದರೆ ನಾವಿಂದು ಅವರ ಪರಿಶ್ರಮದ ಉಳಿವಿಗಾಗಿ ಕಾಳಜಿವಹಿಸಬೇಕೆಂಬ ಬೋಧೆಯಾಗಬಹುದು. ಈ ಹೋರಾಟದಲ್ಲಿ ರಾಜಕೀಯ ವ್ಯಕ್ತಿಗಳು ಮಾತ್ರವಲ್ಲದೆ, ಕನ್ನಡದ ಸಾಹಿತಿಗಳು ಕೂಡ ನಾಡಿನ ಏಕತೆಗೆಂದು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪಾಲ್ಗೊಂಡಿದ್ದಾರೆಂಬುದನ್ನೂ ಸ್ಮರಿಸಬೇಕು. 'ಅಖಂಡ ಕರ್ನಾಟಕ' ಎಂದು, ಅಂದು ಎಲ್ಲರೂ ಕಂಡ ಕನಸಿನ ಪರಿಚಯವನ್ನು ನಮ್ಮ ರಾಷ್ಟ್ರಕವಿ ಕುವೆಂಪು ಆ ಸಮಯದಲ್ಲಿ ರಚಿಸಿದ್ದ ಕವನದ ತುಣುಕಿನ ಮೂಲಕವೇ ಮಾಡಿಕೊಳ್ಳಬಹುದು.

ಕರ್ಣಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೇ?
ಮಂತ್ರಕಣಾ। ಶಕ್ತಿಕಣಾ । ತಾಯಿಕಣಾ । ದೇವಿ ಕಣಾ।
ಬೆಂಕಿಕಣಾ । ಸಿಡಿಲು ಕಣಾ। ಕಾವಕೊಲುವ ಒಲವ ಬಲವ
ಪಡೆದ ಚಲದ ಚಂಡಿಕಣಾ ಋಷಿಯ ಕಾಣ್ಬ ಕಣ್ಣಿಗೆ।
ವಿರೋಧಿಗಾಸ್ಫೋಟಕ,ಕಂಡ, ಕಿವಿಗಖಂಡ ದೇವಿಕಣಾ ಕರ್ಣಾಟಕ।
ಸರಸ್ವತಿಯೆ ರಚಿಸಿದೊಂದ ರಾಜಕೀಯ ತ್ರೋಟಕ ।
ಮೆರೆಯಲಾತ್ಮ ಸಂಸತಿ ಬೆಳಗೆ ಜೀವ ದೀಧಿತಿ

ಮತ್ತೊಂದು ಕವನ ಮಂತ್ರದೀಕ್ಷೆಯಲ್ಲಿ
ಕನ್ನಡ ಜನರೆಲ್ಲರ ಮೇಲಾಣೆ।
ಕನ್ನಡ ನಾಡೊಂದಾಗದೆ ಮಾಣೆ ।
ತೊಡು ದೀಕ್ಷೆಯ ।
ಇಡು ರಕ್ಷೆಯ ।
ಕಂಕಣ ಕಟ್ಟಿಂದೇ ಇನ್ನೆಂದೂ ತಾನೊಂದೇ ।
ಕನ್ನಡ ನಾಡೊಂದೇ । ದೀಕ್ಷೆಯ ತೊಡು ಇಂದೇ॥

ಆ ದಿನಗಳಲ್ಲಿ ಪ್ರೌಢಶಾಲಾ ಹಂತದಲ್ಲಿ, ಕಾಲೇಜು ವಿದ್ಯಾರ್ಥಿಗಳಲ್ಲಿ ನಾಡು–ನುಡಿಯ ಬಗೆಗೆ ಅಭಿಮಾನವನ್ನು ಮೂಡಿಸುವ, ಉತ್ತೇಜಿಸುವ ಮಾರ್ಗದರ್ಶನ ಗುರುವೃಂದದಿಂದ ದೊರೆಯುವಂತಹ ಪರಿಸರವಿತ್ತು. ರಾಷ್ಟ್ರೀಯತೆಯ ಭಾವವನ್ನು ಅವರಲ್ಲಿ ಬೆಳೆಸುವ ಯೋಜನೆಗಳಿರುತ್ತಿದ್ದವು.

ಇಡೀ, ಕರ್ನಾಟಕ ಯುವಕರ ಪಡೆ ತಯಾರಿಸುವ ಉದ್ದೇಶದಿಂದಲೇ 'ಕರ್ನಾಟಕ ಯುವಕರ ಪರಿಷತ್' ಸ್ಥಾಪನೆಯಾಗಿತ್ತು. ಸ್ವಾತಂತ್ರ್ಯ ಬಂದು ಮೈಸೂರು ರಾಜ್ಯದಲ್ಲಿ ಚುನಾಯಿತ ಸರ್ಕಾರದ ಸ್ಥಾಪನೆಯಾಗಿದ್ದರೂ ರಾಜ್ಯದ ಭದ್ರತೆಗಾಗಿ, ಕನ್ನಡನಾಡಿನ ಜನ ಮೈಸೂರು, ಮದರಾಸು, ಮುಂಬೈ, ಕೊಡಗು, ಹೈದರಾಬಾದ್ ಎಂದು ಹಂಚಿಹೋಗಿದ್ದವರೆಲ್ಲರೂ ಒಂದಾಗಬೇಕಿತ್ತು. ಅದು ಅನಿವಾರ್ಯವಾಗಿತ್ತು. ಯುವಶಕ್ತಿಯ ಸದುಪಯೋಗವಾಗಬೇಕೆಂಬ ಆಲೋಚನೆಯ ಮುಖ್ಯ ನೇತಾರರಾಗಿದ್ದವರು ಗೊರೂರು ರಾಮಸ್ವಾಮಿ ಅಯ್ಯಂಗಾರ್, ಹಾರ್ನಹಳ್ಳಿ ರಾಮಸ್ವಾಮಿ, ಕೆ.ಎಂ ರುದ್ರಪ್ಪ, ಎಚ್.ಎಸ್. ದೊರೆಸ್ವಾಮಿ ಮುಂತಾದವರು. 1949 ರಲ್ಲಿ ನಡೆದ ದಾವಣಗೆರೆ ಅಧಿವೇಶನ, ನಂತರದ ಕಡೂರಿನ ಅಧಿವೇಶನಗಳಲ್ಲಿ ಕೆ.ಪಿ.ಸಿ.ಸಿ ಅಧ್ಯಕ್ಷ ನಿಜಲಿಂಗಪ್ಪ, ಸುಬ್ರಹ್ಮಣ್ಯಂ, ಕೆ.ಆರ್.ಕಾರಂತ್, ಗುಡ್ಲೆಪ್ಪಹಳ್ಳಿಕೇರಿ, ಖಾದ್ರಿ ಶಾಮಣ್ಣ, ಪಾಟೀಲಪುಟ್ಟಪ್ಪ, ಬಿ.ಎನ್ ದಾತಾರ್ ತಂಡ ಹಲವು ಹಂತಗಳಲ್ಲಿ ರಾಷ್ಟ್ರನಾಯಕರನ್ನು ಭೇಟಿಮಾಡಿ ತಮ್ಮ ಮನವಿಯನ್ನು ಸಲ್ಲಿಸಿ ರಾಜ್ಯರಚನೆಯ ವಿಚಾರವನ್ನು ಸ್ಪಷ್ಟಪಡಿಸುವ ಪ್ರಯತ್ನ ನಿರಂತರವಾಗಿ ನಡೆದಿತ್ತು. 1952 ರಲ್ಲಿ ಕೆ. ಹನುಮಂತಯ್ಯ ಮುಖ್ಯಮಂತ್ರಿಗಳಾಗಿದ್ದರು. 1953 ರ ಜನವರಿಯಲ್ಲಿ ಹೈದರಾಬಾದಿನ ಒಪ್ಪಿಗೆ ಕೊಡುವ ನಿರ್ಣಯ ಚರ್ಚೆಗೆ ಬಂದಿತ್ತು. ಕರ್ನಾಟಕದಿಂದ ಕೂಡ ಕೆ. ಹನುಮಂತಯ್ಯನವರ ನೇತೃತ್ವದ ತಂಡ ಹೋಗಿತ್ತು. ಹಾರ್ನಹಳ್ಳಿ ರಾಮಸ್ವಾಮಿಯವರೇ ಅರವತ್ತು ಶಾಸಕರ, ಪ್ರಾಂತ ಕಾಂಗ್ರೆಸ್ ಸಮಿತಿ ಸದಸ್ಯರ ಸಹಿ ಇದ್ದ ಮನವಿಯನ್ನು ಪಂ. ನೆಹರೂಗೆ ಒಪ್ಪಿಸಿ ರಾಜ್ಯ ರಚನೆಯ ವಿಚಾರವನ್ನು ದಿಟ್ಟತನದಿಂದ ಖಚಿತ ನುಡಿಗಳಲ್ಲಿ ವಿವರಿಸಿದ್ದರು. ನಾಯಕರಾಗಿ ಹನುಮಂತಯ್ಯನವರ ಮಾತು, ಜನಾಭಿಪ್ರಾಯ ಎಲ್ಲವೂ ಸೇರಿ ನೆಹರೂ ರಾಜ್ಯ ಪುನರ್ವಿಂಗಡಣಾ ಸಮಿತಿಯನ್ನು ನೇಮಿಸಿದ್ದರು. ಎಲ್ಲ ವರದಿಯ ಫಲವಾಗಿ 1956 ನವೆಂಬರ್ 1 ರಂದು ಕನ್ನಡ ಜನರ ಬಯಕೆ ಈಡೇರಿತ್ತು. ಕರ್ನಾಟಕ ರಾಜ್ಯ ಸ್ಥಾಪನೆಯಾಗಿ ಏಕೀಕರಣವಾಗಿತ್ತು. ಈಗ? ಇಂದು? ಇಷ್ಟೆಲ್ಲ ಶ್ರಮವಹಿಸಿ ಸ್ಥಾಪಿತವಾದ ಏಕೀಕರಣ ದಿನದ ಮಹತ್ವ ನಾವಿಂದು ಅರಿತಿದ್ದೇವೆಯೇ? ಕನ್ನಡಿಗರು ಭಾಷಾಭಿಮಾನ ಶೂನ್ಯರಾಗಿದ್ದಾರೆಂಬ ಕಹಿಸತ್ಯ ನಮ್ಮೆದುರಿಗೆ ನಿಚ್ಚಳವಾಗಿಯೇ ಅನುಭವಕ್ಕೆ ಬರುತ್ತಿದೆಯಲ್ಲ? ಜಾಗತೀಕರಣ ಪ್ರಭಾವಕ್ಕೆ ಸಿಲುಕಿದ ಯುವಜನಾಂಗ ನಮ್ಮ ನೆಲದ ಸಂಸ್ಕೃತಿಯ ಹಿರಿಮೆಯ ಬಗೆಗೇ ಅಂಧರಾಗಿದ್ದಾರೆ. ಯಾವುದೇ ಶಾಲಾ ಕಾಲೇಜುಗಳಲ್ಲಿ ನಡೆಯುವ ವಾರ್ಷಿಕೋತ್ಸವಾದಿ ಸಮಾರಂಭಗಳಲ್ಲಿ, ಪ್ರತಿಭಾ ಸ್ಪರ್ಧೆಗಳಲ್ಲಿ ಕನ್ನಡ ನೆಲದ ದೇಸೀ ಸಂಸ್ಕೃತಿಯ ಸೊಗಡನ್ನು ಕಾಣುವುದೇ ಅಸಾಧ್ಯವಾಗಿದೆ. ಶೈಕ್ಷಣಿಕವಾಗಿ ಹೇಳಬೇಕೆಂದರೆ ಹೆಚ್ಚಿನ ಖಾಸಗೀ ಶಾಲೆಗಳಲ್ಲಿ, ಕಾಲೇಜುಗಳಲ್ಲಂತೂ ಕನ್ನಡ ಭಾಷಾ ಅಧ್ಯಯನಕ್ಕೆ ಕನಿಷ್ಠ ಸ್ಥಾನವನ್ನು ಮಾತ್ರವೇ ನೀಡಲಾಗುತ್ತಿದೆ. ವೃತ್ತಿಪರ ಶಿಕ್ಷಣದ ಪ್ರವೇಶಕ್ಕೆ ಅಗತ್ಯವಾದ ಐಚ್ಛಿಕ ವಿಚಯಗಳಿಗೆ ನೀಡುವ ಆದ್ಯತೆಯ ಅಡಿಯಲ್ಲಿ ಭಾಷಾ ವ್ಯಾಸಂಗ ಮೂಲೆಗುಂಪಾಗಿದೆ. ಜೀವನಮೌಲ್ಯಗಳನ್ನು ತಿಳಿಸುವ, ವ್ಯಕ್ತಿತ್ವವನ್ನು ಹದಗೊಳಿಸುವ ಭಾಷೆಯ ಮಹತ್ವವನ್ನು ಅರಿಯಲಾಗದೆ ವಿದ್ಯಾರ್ಥಿಗಳು ಅದರ ಆಸಕ್ತಿಯೇ ಇಲ್ಲದ ಸ್ಥಿತಿಯಲ್ಲಿದ್ದಾರೆ. ಮಾರ್ಗದರ್ಶಕರ ಅವಜ್ಞೆಯ ಈ ಕಾರಣದಿಂದ ಆ ವಿದ್ಯಾರ್ಥಿಗಳಲ್ಲಿ ಭಾಷಾ ಸಾಹಿತ್ಯದಲ್ಲಾಗಲೀ, ನಾಡಿನ ಸಂಸ್ಕೃತಿಯನ್ನು ತಿಳಿಯುವುದರಲ್ಲಾಗಲಿ ಹೇಗೆ ತಾನೇ ಆಸಕ್ತಿ ಬಂದೀತು?. ಇಂತಹ ಯುವಜನಾಂಗ ಕನ್ನಡ ರಾಜ್ಯೋತ್ಸವದ ಆಚರಣೆಯ ವೈಶಿಷ್ಟ್ಯವನ್ನಾಗಲೀ, ಮಹತ್ವವನ್ನಾಗಲೀ ಹೇಗೆ ತಾನೇ ಅರ್ಥೈಸಿಕೊಳ್ಳುತ್ತಾರೆ? ವ್ಯಾಲೆಂಟೈನ್ಸ್ ಡೇ, ಫ್ರೆಂಡ್‌ಶಿಪ್ ಡೇ ಮುಂತಾದ ದಿನಗಳಂತೆ ಇದೂ ಹತ್ತರಲ್ಲಿ ಒಂದಾಗುತ್ತದಷ್ಟೇ.

ಈ ಎಲ್ಲಾ ವಿಚಾರಗಳನ್ನು ಮನನ ಮಾಡುತ್ತ ನಾಡಿನ ಯುವ ಸಮುದಾಯಕ್ಕೆ ಕರ್ನಾಟಕ ಏಕೀಕರಣದ ಉದ್ದೇಶ, ಚರಿತ್ರೆ ತಿಳಿಸಿ, ಕನ್ನಡ ಭಾಷಾ ಕಲಿಕೆಯಲ್ಲಿ ಆಸಕ್ತಿ, ಅಭಿಮಾನವನ್ನು ಮೂಡಿಸುವ, ಮಾರ್ಗದರ್ಶನದ ಕಾರ್ಯ ನಡೆಯಬೇಕು. ಕೇವಲ ಅಂಕಗಳಿಕೆಯ ಗುರಿ ಹೊಂದಿದ ಶಿಕ್ಷಣ ನೀಡದೆ ಮೌಲ್ಯಾಧಾರಿತ ಶಿಕ್ಷಣ ನೀಡುವತ್ತ ಗಮನಹರಿಸಬೇಕು. ಬದುಕಿನಲ್ಲಿ ಬುದ್ಧಿ, ಭಾವಗಳ ಸಮ್ಮಿಲನ ಅಗತ್ಯವೆಂಬ ಅರಿವು ಮೂಡಿಸುವ ಸಂಸ್ಕೃತಿ ಪಾಠವನ್ನು ಕಲಿಸಬೇಕು. ಕನ್ನಡ ರಾಜ್ಯೋತ್ಸವದ ಆಚರಣೆಯ ಅರ್ಥ ತಿಳಿದು ನಮ್ಮೆಲ್ಲಾ ಶಿಕ್ಷಕರು ಅದನ್ನು ಗೌರವಿಸುತ್ತ ಮಾಡುವಂತಾಗಬೇಕು.

ನಂ. ನಾಗಲಕ್ಷ್ಮಿ

# ಚಿತ್ರ ಸುದ್ದಿ



18.9.14 ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ನಡೆದ ಶಿಕ್ಷಣ ಕಾರ್ಯಾಗಾರದಲ್ಲಿ ಶಾಸಕರಾದ ಕ್ಯಾ. ಗಣೇಶ್ ಕಾರ್ಣಿಕ್ ಅವರು ಮಾತನಾಡುತ್ತಿರುವುದು. ವೇದಿಕೆಯಲ್ಲಿ ಸರ್ವಶ್ರೀ ಚಕ್ರವರ್ತಿ ಸೂಲಿಬೆಲೆ, ಸುರೇಶ್ ಕುಲಕರ್ಣಿ, ಬಿ.ಎ. ಸುರೇಂದ್ರ, ಡಾ॥ ಹೆಚ್.ಎಂ. ಚಂದ್ರಶೇಖರ ಹಾಗೂ ಶ್ರೀನಿವಾಸಮೂರ್ತಿ.



18.9.14 ಶೈಕ್ಷಣಿಕ ಕಾರ್ಯಾಗಾರದಲ್ಲಿ ಅಧ್ಯಾಪಕ ವೃಂದ



21–9–2014 ರಂದು ಕ.ರಾ.ಮಾ.ಶಿ. ಸಂಘದ ಮಹಿಳಾ ವಿಭಾಗದ ವತಿಯಿಂದ ಶಿಕ್ಷಕಿಯರಿಗಾಗಿ ನಡೆದ ಬರಹಗಾರರ ಕಮ್ಮಟದಲ್ಲಿ ಅತಿಥಿಗಳು ಹಾಗೂ ಅಪೇಕ್ಷಿತರು

Registered No. RNI 45459/85
RNP/Ka/BGS-125/2012-14
Posted at Bangalore GPO
Bangalore -560 001

OCTOBER 2014
Date of Posting
20th or 21st of every month

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com